V-1

**Marks: 100**
**Date: 25.07.2015**
**Time: 90 minutes**

## PRELIMINARY EXAMINATION FOR THE POST OF CIVIL JUDGES

## ದಿವಾಣಿ ನ್ಯಾಯಾಧೀಶರ ಹುದ್ದೆಗೆ ಪೂರ್ವಭಾವಿ ಪರೀಕ್ಷೆ

01. While executing a decree for maintenance, the salary of the judgment-debtor to the extent of -
ಜೀವನಾಂಶಕ್ಕಾಗಿನ ಹುಕುಂನಾಮೆಯನ್ನು ಅಮಲ್ದಾರಿಗೊಳಿಸುವಲ್ಲಿ ತೀರ್ಪುಋಣಿಯ ಸಂಬಳದಲ್ಲಿನ

(a) 1/3rd cannot be attached
೧/೩ ಭಾಗವನ್ನು ಜಪ್ತಿಮಾಡಲಾಗದು

(b) ½ cannot be attached
೧/೨ ಭಾಗವನ್ನು ಜಪ್ತಿಮಾಡಲಾಗದು

(c) 1/4th cannot be attached
೧/೪ ಭಾಗವನ್ನು ಜಪ್ತಿಮಾಡಲಾಗದು

(d) None of the above
ಮೇಲಿನವುಗಳ ಪೈಕಿ ಯಾವುದೂ ಅಲ್ಲ

02. A defendant shall file written statement within ___ days
ಪ್ರತಿವಾದಿಯು ___ ದಿನಗಳಲ್ಲಿ ಲಿಖಿತ ಹೇಳಿಕೆಯನ್ನು ದಾಖಲಿಸತಕ್ಕದ್ದು.

(a) 60
೬೦

(b) 90
೯೦

(c) 30
೩೦

(d) 120
೧೨೦

03. Return of plaint for want of jurisdiction amounts to -
ಅಧಿಕಾರವ್ಯಾಪ್ತಿಯ ಕೊರತೆಯಿಂದಾಗಿ ವಾದಪತ್ರವನ್ನು ಹಿಂದಿರುಗಿಸಿದಾಗ ಆಗುವ ಪರಿಣಾಮವೆಂದರೆ

(a) transfer of the suit
ದಾವೆಯ ವರ್ಗಾವಣೆ

(b) does not amount to transfer of the suit
ದಾವೆಯ ವರ್ಗಾವಣೆ ಆಗುವುದಿಲ್ಲ

(c) amounts to decree
ಹುಕುಂನಾಮೆಯಾಗುತ್ತದೆ

(d) None of the above
ಮೇಲಿನವುಗಳ ಪೈಕಿ ಯಾವುದೂ ಅಲ್ಲ

04. A Magistrate can take cognizance -
ದಂಡಾಧಿಕಾರಿಯು ಸಂಜ್ಞಾನವನ್ನು ಪಡೆಯಬಹುದಾಗಿರುತ್ತದೆ

(a) only upon a complaint
ಕೇವಲ ದೂರಿನಮೇಲೆ

(b) only upon a police report
ಆರಕ್ಷಕರ ವರದಿಯ ಮೇಲೆ

(c) only upon the information received from any person other than a police officer, or upon his own knowledge.
ಆರಕ್ಷಕ ಅಧಿಕಾರಿಯ ಹೊರತಾಗಿ ಯಾವುದೇ ವ್ಯಕ್ತಿಯ ಮಾಹಿತಿಯ ಮೇಲೆ ಅಥವ ತನ್ನ ಸ್ವಂತ ತಿಳುವಳಿಕೆಯ ಮೇಲೆ

(d) Any of the above
ಮೇಲಿನವುಗಳ ಪೈಕಿ ಯಾರಾದರೂ

05. A confession made before a police officer -
ಆರಕ್ಷಕ ಅಧಿಕಾರಿಯ ಮುಂದೆ ಮಾಡಿಕೊಂಡ ತಪ್ಪೊಪ್ಪಿಗೆ -

(a) shall not be proved against the person accused of any offence
ಯಾವುದೇ ಅಪರಾಧದ ಆರೋಪ ಹೊಂದಿದ ವ್ಯಕ್ತಿಯ ವಿರುದ್ಧ ಸಾಬೀತು ಪಡಿಸಲಾಗದು

(b) can be proved against the person accused of an offence
ಯಾವುದೇ ಅಪರಾಧದ ಆರೋಪ ಹೊಂದಿದ ವ್ಯಕ್ತಿಯ ವಿರುದ್ಧ ಸಾಬೀತು ಪಡಿಸಬಹುದು

(c) can be proved only through the investigating officer
ಕೇವಲ ತನಿಖಾಧಿಕಾರಿಯ ಮೂಲಕ ಸಾಬೀತು ಪಡಿಸಬಹುದು

(d) can be proved if permitted by the Court
ನ್ಯಾಯಾಲಯ ಅನುಮತಿಸಿದಲ್ಲಿ ಸಾಬೀತು ಪಡಿಸಬಹುದು

06. If mortgage by deposit of title deeds is to be valid, the handing over of the title deeds of the property to the mortgagee can be made -
ಸ್ವಾಮ್ಯಪತ್ರಗಳ ಠೇವಣಿ ಮೂಲಕ ಅಡಮಾನವು ಊರ್ಜಿತವಾಗಬೇಕಾದಲ್ಲಿ ಆಸ್ತಿಗೆ ಸಂಬಂಧಿಸಿದ ಸ್ವಾಮ್ಯಪತ್ರಗಳ ಹಸ್ತಾಂತರವನ್ನು ಮಾಡಬೇಕಾದುದು -

(a) at any place
ಯಾವುದೇ ಸ್ಥಳದಲ್ಲಿ

(b) at a place notified by the government
ಸರ್ಕಾರದಿಂದ ಅಧಿಸೂಚಿತ ಸ್ಥಳದಲ್ಲಿ

(c) at Sub-Registrar's office
ಉಪನೋಂದಣಾಧಿಕಾರಿಯ ಕಛೇರಿಯಲ್ಲಿ

(d) in the presence of attestors
ದೃಢೀಕರ್ತರ ಸಮಕ್ಷಮದಲ್ಲಿ

07. 'Equality before law' is a fundamental right enshrined in which of the following Articles of the Constitution of India -
'ಕಾನೂನಿನ ಮುಂದೆ ಸಮಾನತೆ' ಯು ಭಾರತದ ಸಂವಿದಾನದ ಈ ಕೆಳಗಿನ ಯಾವ ಅನುಚ್ಛೇದದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದೆ?

(a) Article 13
ಅನುಚ್ಛೇದ ೧೩

(b) Article 16
ಅನುಚ್ಛೇದ ೧೬

(c) Article 14
ಅನುಚ್ಛೇದ ೧೪

(d) Article 19
ಅನುಚ್ಛೇದ ೧೯

08. Relief of injunction cannot be granted -
ನಿರ್ಬಂಧಾಜ್ಞೆಯ ಆದೇಶ್ಯನ್ನು ನೀಡಲಾಗದು

(a) if a person is not able to prove his title over the property
ಆಸ್ತಿಯ ಕುರಿತಂತೆ ವ್ಯಕ್ತಿಯೊಬ್ಬನು ತನ್ನ ಸ್ವಾಮ್ಯವನ್ನು ಸಾಬೀತು ಪಡಿಸಲು ಸಾಧ್ಯವಾಗದಿದ್ದಾಗ

(b) when equally efficacious relief can certainly be obtained by any other usual mode
ಬೇರಾವುದೇ ಸಾಮೂನ್ಯ ರೀತಿಯಲ್ಲಿ ಸಮಾನ ಪರಿಣಾಮಕಾರಿ ಪರಿಹಾರವನ್ನು ಖಂಡಿತವಾಗಿಯೂ ಪಡೆಯುವಂತಿದ್ದಲ್ಲಿ

(c) when the plaintiff has no personal interest in the matter
ವಾದಿಯು ವಿಷಯದಲ್ಲಿ ವೈಯಕ್ತಿಕ ಹಿತಾಸಕ್ತಿ ಹೊಂದಿಲ್ಲದಿದ್ದಾಗ

(d) both (b) and (c)
(ಬಿ) ಮತ್ತು (ಸಿ) ಗಳೆರಡು

09. Novation of a contract under India Contract Act, means-
ಭಾರತೀಯ ಕರಾರು ಅಧಿನಿಯಮದಡಿಯಲ್ಲಿ ಗುತ್ತಿಗೆ ನವೀಕರಣ ಎಂದರೆ-

(a) cancellation of contract
ಗುತ್ತಿಗೆಯನ್ನು ರದ್ದುಪಡಿಸುವುದು

(b) alteration of the contract
ಗುತ್ತಿಗೆಯನ್ನು ಬದಲಾವಣೆ ಮಾಡುವುದು

(c) the renewal of original contract
ಮೂಲ ಗುತ್ತಿಗೆಯನ್ನು ನವೀಕರಿಸುವುದು

(d) substitution of a new contract in place of original contract
ಮೂಲ ಗುತ್ತಿಗೆಯ ಜಾಗದಲ್ಲಿ ಹೊಸಾ ಗುತ್ತಿಗೆಯನ್ನು ಪ್ರತಿಸ್ಥಾಪಿಸುವುದು

10. A fists B on his right eye and causes permanent privation of the sight of that eye. He is said to have -
ಎಯು ಬಿಯ ಬಲಗಣ್ಣಿಗೆ ಮುಷ್ಟಿಪ್ರಹಾರಮಾಡಿ ಆ ಕಣ್ಣಿನ ದೃಷ್ಟಿಯು ಹೋಗುವಂತೆ ಮಾಡುತ್ತಾನೆ. ಆತನು ______ನ್ನು ಮಾಡಿದ್ದಾನೆಂದು ಹೇಳಬಹುದಾಗಿರುತ್ತದೆ

(a) committed an offence of hurt
ಗಾಯಗೊಳಿಸುವಿಕೆಯ ಅಪರಾಧವನ್ನು ಮಾಡಿದ್ದಾನೆ

(b) committed an offence of grievous hurt
ತೀವ್ರ ಗಾಯ ಉಂಟುಮಾಡಿದ ಅಪರಾಧವನ್ನು ಮಾಡಿದ್ದಾನೆ

(c) used criminal force
ಅಪರಾಧಿತ ಬಲಪ್ರಯೋಗವನ್ನು ಉಪಯೋಗಿಸಿದ್ದಾನೆ

(d) assaulted B
ಬಿ ಯ ಮೇಲೆ ಹಲ್ಲೆ ಮಾಡಿದ್ದಾನೆ

11. Injury means any harm whatever illegally caused to a person –
ಗಾಯವೆಂದರೆ ಯಾವುದೇ ವ್ಯಕ್ತಿಯ ___ಗೆ ಉಂಟು ಮಾಡುವ ಹಾನಿಯಾಗಿರುತ್ತದೆ –

(a) in body
ದೇಹಕ್ಕೆ

(b) in mind
ಮನಸ್ಸಿಗೆ

(c) in reputation or property
ಗೌರವ ಅಥವ ಆಸ್ತಿಗೆ

(d) All the above
ಮೇಲಿನೆಲ್ಲವುಗಳು

12. There is an agreement between A and B that B shall on receipt of Rs.1,000/- from A deliver either rice or smuggled opium. Then,
ಎ ಇಂದ ರೂ.೧೦೦೦ ಪಡೆದ ನಂತರ ಅಕ್ಕಿ ಅಥವಾ ಕಳ್ಳ ಸಾಗಾಣೆಯ ಅಫೀಮನ್ನು ಬಿ ಯು ನೀಡುವ ಕುರಿತಂತೆ ಎ ಮತ್ತು ಬಿ ಮಧ್ಯೆ ಒಂಪದವೊಂದಿದೆ. ಹಾಗಾದರೆ,

(a) the contract is valid with regard to delivery of both rice and smuggled opium.
ಅಕ್ಕಿ ಮತ್ತು ಕಳ್ಳಸಾಗಾಣೆಯ ಅಫೀಮು ಎರಡನ್ನು ನೀಡುವ ಕುರಿತಂತೆ ಕರಾರು ಸಿಂಧುವಾಗಿರುತ್ತದೆ

(b) the contract is valid with regard to delivery of rice only
ಅಕ್ಕಿ ನೀಡುವ ಕುರಿತಂತೆ ಮಾತ್ರವೇ ಕರಾರು ಸಿಂಧುವಾಗಿರುತ್ತದೆ

(c) the contract is valid with regard to delivery of smuggled opium only
ಕಳ್ಳಸಾಗಾಣೆಯ ಅಫೀಮು ನೀಡುವ ಕುರಿತಂತೆ ಮಾತ್ರವೇ ಕರಾರು ಸಿಂಧುವಾಗಿರುತ್ತದೆ

(d) the entire contract is void
ಸಂಪೂರ್ಣ ಕರಾರು ಶೂನ್ಯವಾಗಿರುತ್ತದೆ

13. A surety stands discharged -
ಜಾಮಿನುದಾರ ಯಾವಾಗ ಬಿಡುಗಡೆಹೊಂದುತ್ತಾನೆಂದರೆ -

(a) when the terms of the contract are varied without surety's consent
ಜಾಮಿನುದಾರನ ಒಪ್ಪಿಗೆಯಿಲ್ಲದೆಯೆ ಕರಾರಿನ ನಿಬಂಧನೆಗಳನ್ನು ವ್ಯತ್ಯಯ ಮಾಡಿದಾಗ

(b) when co-surety is released
ಸಹ ಜಾಮಿನುದಾರ ಬಿಡುಗಡೆಯಾದಾಗ

(c) when the principal debtor dies
ಪ್ರದಾನ ಋಣಿ ನಿಧನಹೊಂದಿದಾಗ

(d) when there is forbearance to sue on the part of the principal debtor
ಪ್ರದಾನ ಋಣಿಯ ಕುರಿತಾಗಿ ದಾವೆಯನ್ನು ಹೂಡದೇ ಇರುವಾಗ

14. Presumption as to production of electronics records as per Section 90A of Evidence Act may be drown if the document is-
ದಾಖಲೆಯು ____ ಆಗಿದ್ದಲ್ಲಿ ಸಾಕ್ಷ್ಯ ಅಧಿನಿಯಮದ ಕಲಂ ೯೦ಎ ರಡಿ ವಿದ್ಯುನ್ಮಾನ ದಾಖಲೆಗಳ ಹಾಜರುಪಡಿಸುವಿಕೆ ಕುರಿತಂತೆ ಪೂರ್ವಭಾವನೆಗೆ ಬರಬಹುದಾಗಿರುತ್ತದೆ

(a) 10 years old
೧೦ ವರ್ಷಗಳಷ್ಟು ಹಳೆಯದು

(b) 05 years old
೦೫ ವರ್ಷಗಳಷ್ಟು ಹಳೆಯದು

(c) 30 years old
೩೦ ವರ್ಷಗಳಷ್ಟು ಹಳೆಯದು

(d) 12 years old
೧೨ ವರ್ಷಗಳಷ್ಟು ಹಳೆಯದು

15. Sea bird located in which State-
'ಸೀ ಬರ್ಡ್' ಯಾವ ರಾಜ್ಯದಲ್ಲಿದೆ?

(a) Goa
ಗೋವಾ

(b) Maharashtra
ಮಹಾರಾಷ್ಟ್ರ

(c) Karnataka
ಕರ್ನಾಟಕ

(d) Kerala
ಕೇರಳ

16. Article 39-A inserted by the Constitution ($42^{nd}$ Amendment) Act, 1976 for what?
ಸಂವಿಧಾನದ (೪೨ ನೆಯ ತಿದ್ದುಪಡಿ) ಕಾಯ್ದೆ, ೧೯೭೬ ರಲ್ಲಿ ಅನುಚ್ಛೇದ ೩೯-ಎ ಯನ್ನು ಏತಕ್ಕಾಗಿ ಸೇರಿಸಲಾಯಿತು?

(a) Environment Right
ಪರಿಸರ ಹಕ್ಕು

(b) Property right as a Constitution right
ಸಂವಿದಾನದ ಹಕ್ಕಾಗಿ ಆಸ್ತಿಯ ಹಕ್ಕು

(c) Equal justice and legal aid
ಸಮಾನ ನ್ಯಾಯ ಮತ್ತು ಕಾನೂನು ನೆರವು

(d) Protection of woman from domestic violence
ಕೌಟುಂಬಿಕ ಹಿಂಸೆಯಿಂದ ಮಹಿಳೆಯ ಸಂರಕ್ಷಣೆ

17. Sale of Intangible property can be effected-
ಅಮೂರ್ತ (ಮುಟ್ಟಿ ತಿಳಿಯಲಾಗದ) ಸ್ವತ್ತಿನ ಮಾರಾಟವನ್ನು ಯಾವ ಪ್ರಕಾರವಾಗಿ ಮಾಡಬಹುದೆಂದರೆ-

(a) Only by a registered instrument (Section 54)
ನೋಂದಾಯಿಸಲ್ಪಟ್ಟ ಲಿಖಿತದ ಮೂಲಕ ಮಾತ್ರ (ಕಲಂ ೫೪)

(b) by a registered instrument only if the value is more than Rs.100
ರೂ.೧೦೦ ಕ್ಕಿಂತ ಹೆಚ್ಚು ಮೌಲ್ಯಹೊಂದಿದ್ದ ನೋಂದಾಯಿತ ಲಿಖಿತದ ಮೂಲಕ

(c) either by registered instrument or by delivery of possession
ನೊಂದಾಯಿತ ಲಿಖಿತದ ಮೂಲಕ ಅಥವ ಸ್ವಾದೀನ ನೀಡುವುದರ ಮೂಲಕ

(d) By delivery of possession
ಸ್ವಾದೀನ ನೀಡುವುದರ ಮೂಲಕ

18. A document required by law to be attested cannot be used in evidence-
ಕಾನೂನಿನಡಿ ಅನುಪ್ರಮಾಣಿಸಬೇಕಾದ ದಾಖಲೆಯನ್ನು ಈ ಕೆಳಗಿನದರ ಹೊರತಾಗಿ ಸಾಕ್ಷ್ಯದಲ್ಲಿ ಉಪಯೋಗಿಸುವಂತಿಲ್ಲ

(a) Unless at least two attesting witness are examined
ಕಡೆಯ ಪಕ್ಷ ಇಬ್ಬರು ಅನುಪ್ರಮಾಣಿಕಸಾಕ್ಷಿದಾರರನ್ನು ವಿಚಾರಣೆಗೊಳಪಡಿಸದ ಹೊರತು

(b) Unless at least one attesting witness alive has been called for the purpose of proving it
ಅದನ್ನು ಸಾಬಿತುಪಡಿಸುವ ಸಲುವಾಗಿ ಕಡೆಯಪಕ್ಷ ಜೀವಂತವಿರುವ ಒಬ್ಬ ಅನುಪ್ರಮಾಣಿಕ ಸಾಕ್ಷಿದಾರನನ್ನು ಕರೆಯದಹೊರತು

(c) Unless all the attesting witnesses are examined
ಎಲ್ಲಾ ಅನುಪ್ರಮಾಣಿಕಸಾಕ್ಷಿದಾರರನ್ನು ವಿಚಾರಣೆಗೊಳಪಡಿಸದ ಹೊರತು

(d) Unless the scribe and the attesting witness are examined
ಲಿಪಿಗಾರ ಮತ್ತು ಅನುಪ್ರಮಾಣಿಕಸಾಕ್ಷಿದಾರರನ್ನು ವಿಚಾರಣೆಗೊಳಪಡಿಸದ ಹೊರತು

19. Stalking as an offence means-
ಅಪರಾಧವಾಗಿ ಕದ್ದು ನಡೆ, ಎಂದರೆ-

(a) Illegally storing
ಅಕ್ರಮವಾಗಿ ಸಂಗ್ರಹಿಸುವುದು

(b) Illegally following a woman and attempting to contact her
ಮಹಿಳೆಯನ್ನು ಅಕ್ರಮವಾಗಿ ಹಿಂಬಾಲಿಸುವುದು ಮತ್ತು ಆಕೆಯನ್ನು ಸಂಪರ್ಕಿಸಲು ಪ್ರಯತ್ನಿಸುವುದು

(c) Insulting a lady
ಮಹಿಳೆಯ ಅವಮಾನೀಕರಣ

(d) Imitating a lady
ಮಹಿಳೆಯನ್ನು ಅನುಕರಿಸುವುದು

20. A senior citizen is given right to recover immediate possession of the premises under which provision of the Karnataka Rent Act?
ಕರ್ನಾಟಕ ಬಾಡಿಗೆ ಕಾಯಿದೆಯ ಯಾವ ಅವಕಾಶದಡಿಯಲ್ಲಿ ಆವರಣದ ತಕ್ಷಣದ ಸ್ವಾದೀನ ಪಡೆಯುವಿಕೆ ಹಕ್ಕನ್ನು ಹಿರಿಯ ನಾಗರೀಕನಿಗೆ ನೀಡಲಾಗಿದೆ?

(a) Section 31 (1)(c)
ಕಲಂ ೩೧(೧)(ಸಿ)

(b) Section 30(1)
ಕಲಂ ೩೦(೧)

(c) Section 29(1)
ಕಲಂ ೨೯(೧)

(d) Section 28
ಕಲಂ ೨೮

21. A Judgment on admission can be given under Order ________, Rule ________ of the Code of Civil Procedure, 1908.
ದಿವಾಣಿ ಪ್ರಿಕ್ರಿಯಾ ಸಂಹಿತೆ, ೧೯೦೮ ರ ಕ್ರಮಾದೇಶ _____ ನಿಯಮ _____ರಡಿ ಅಂಗೀಕಾರ್ಹತೆ ಕುರಿತ ತೀರ್ಪು ನೀಡಬಹುದಾಗಿರುತ್ತದೆ

(a) XII : 5
XII : ೫

(b) XII : 6
XII : ೬

(c) VI : 4
VI : ೪

(d) VI : 5
VI : ೫

22. A mortgage by way of deposit of title is also known as-
ಸ್ವಾಮ್ಯ ಪತ್ರಗಳ ಠೇವಣೀ ಮೂಲಕದ ಅಡಮಾನವನ್ನು ಹೀಗೆಂದೂ ಸಹ ಕರೆಯುತ್ತಾರೆ

(a) Usufructuary mortgage
ಭೋಗ್ಯದ ಅಡಮಾನ

(b) English mortgage
ಇಂಗ್ಲೀಷ್ ಅಡಮಾನ

(c) Equitable mortgage
ನ್ಯಾಯಸಮ್ಮತ ಅಡಮಾನ

(d) Anomalous mortgage
ವಿಲಕ್ಷಣ ಅಡಮಾನ

23. The principle embodied in Section 43 of the Transfer of Property Act is-
ಆಸ್ತಿಯ ವರ್ಗಾವಣೆ ಕಾಯ್ದೆಯ ಕಲಂ ೪೩ ರಡಿ ರೂಪಿಲ್ಪಟ್ಟ ತತ್ವವೆಂದರೆ-

(a) Holding over
ಅತಿಧಾರಣೆ

(b) Clog on redemption
ಬಿಡಿಸಿಕೊಳ್ಳುವುದಕ್ಕೆ ಅವರೋಧ (ಆತಂಕ)

(c) Feeding the grant by estoppel
ಪ್ರತಿಬಂಧದ ಮೂಲಕ ಮಂಜೂರಾತಿಯ ಘೋಷಣೆ

(d) None of the above
ಮೇಲಿನವುಗಳ ಪೈಕಿ ಯಾವುದೂ ಅಲ್ಲ

24. Article 21-A deals with _______
ಅನುಚ್ಛೇದ ೨೧-ಎ ಈ ಕುರಿತಾಗಿ ಹೇಳುತ್ತದೆ

(a) Right to food
ಆಹಾರದ ಹಕ್ಕು

(b) Right to education
ಶಿಕ್ಷಣದ ಹಕ್ಕು

(c) Right to employment
ಉದ್ಯೋಗದ ಹಕ್ಕು

(d) None of the above
ಮೇಲಿನವುಗಳಲ್ಲಿ ಯಾವುದೂ ಅಲ್ಲ

25. Which of the following is not a judicial proceeding?
ಕೆಳಗಿನವುಗಳಲ್ಲಿ ಯಾವುದು ನ್ಯಾಯಾಂಗ ನಡಾವಳಿಗಳಲ್ಲ?

(a) Proceedings under Section 200 of CrPC
ದಂಡ ಪ್ರಕ್ರಿಯಾ ಸಂಹಿತೆಯ ಕಲಂ ೨೦೦ ರಡಿಯಲ್ಲಿ ನಡಾವಳಿಗಳು

(b) Proceedings under Section 202 of CrPC
ದಂಡ ಪ್ರಕ್ರಿಯಾ ಸಂಹಿತೆಯ ಕಲಂ ೨೦೨ ರಡಿಯಲ್ಲಿ ನಡಾವಳಿಗಳು

(c) A magistrate holding a test identification parade
ಗುರುತು ಕವಾಯಿತು ನಡೆಸುವ ದಂಡಾಧಿಕಾರಿಯಕ್ರಿಯೆ

(d) Proceedings under Section 340 of CrPC
ದಂಡ ಪ್ರಕ್ರಿಯಾ ಸಂಹಿತೆಯ ಕಲಂ ೩೪೦ ರಡಿಯಲ್ಲಿ ನಡಾವಳಿಗಳು

26. Any question suggesting the answer which the person putting it wishes or expects to receive, is called a _________ question.
ಪ್ರಶ್ನೆಗಳನ್ನು ಹಾಕಿದ ವ್ಯಕ್ತಿ ಇಚ್ಛಿಸಿದ ಅಥವಾ ಪಡೆಯಲು ನಿರೀಕ್ಷಿಸಿದ ಉತ್ತರಗಳನ್ನು ಸಲಹೆರೂಪದಲ್ಲಿ ಒಳಗೊಂಡ ಪ್ರಶ್ನೆಗಳನ್ನು _____ ಪ್ರಶ್ನೆಗಳು ಎಂದು ಕರೆಯಲಾಗುತ್ತದೆ.

a) cross question
ಪಾಟೀಸವಾಲು

b) question in examination-in-chief
ಮುಖ್ಯ ವಿಚಾರಣೆಯಲ್ಲಿನ ಪ್ರಶ್ನೆ

c) leading question
ಉತ್ತರ ಸೂಚಕ ಪ್ರಶ್ನೆ

d) none of the above
ಮೇಲಿನವುಗಳಾವುವೂ ಅಲ್ಲ

27. In law a man is presumed to be dead if he is not heard of for-
______ವರ್ಷಗಳಿಂದ ವ್ಯಕ್ತಿಯೊಬ್ಬನ ಕುರಿತಾಗಿ ಏನೂ ಕೇಳದೇ ಇದ್ದಲ್ಲಿ ಆ ವ್ಯಕ್ತಿ ನಿಧನಹೊಂದಿರುತ್ತಾನೆಂಬ ಪೂರ್ವ ಭಾವನೆಗೆ ಕಾನೂನಿನಲ್ಲಿ ಬರಬಹುದಾಗಿರುತ್ತದೆ-

(a) 5 years
೫ ವರ್ಷಗಳು

(b) 7 years
೭ ವರ್ಷಗಳು

(c) 12 years
೧೨ ವರ್ಷಗಳು

(d) 14 years
೧೪ ವರ್ಷಗಳು

28. Who wrote the song "Saare Jahan Se Achha Hindostan Hamara"?
"ಸಾರೇ ಜಹಾಂಸೆ ಅಚ್ಛ ಹಿಂದೂಸ್‌ತಾನ್ ಹಮಾರ" ಪದ್ಯವನ್ನು ಬರೆದವರು ಯಾರು?

(a) Dayanand Saraswati (Swami)
ದಯಾನಂದ ಸರಸ್ವತಿ (ಸ್ವಾಮಿ)

(b) Raja Ram Mohan Roy
ರಾಜರಾಮ್ ಮೋಹನ್ ರಾಯ್

(c) Swami Vivekananda
ಸ್ವಾಮಿ ವಿವೇಕಾನಂದ

(d) Mohammed Iqbal
ಮೊಹಮ್ಮದ್ ಇಕ್ಬಾಲ್

29. A place where public records are kept is called an/a –
ಸಾರ್ವಜನಿಕ ದಾಸ್ತಾವೇಜುಗಳನ್ನು ಇಡುವ ಜಾಗವನ್ನು _____ ಎಂದು ಕರೆಯುತ್ತಾರೆ

(a) Apiary
ಜೇನುಗೂಡು

(b) Aviary
ಹಕ್ಕಿಗೂಡು

(c) Archives
ಸಾರ್ವಜನಿಕ ದಫ್ತರಖಾನೆ

(d) Laboratory
ಪ್ರಯೋಗಾಲಯ

30. Every suit shall be instituted-
ಯಾವುದೇ ದಾವೆಯ ಹೂಡುವಿಕೆಯಾಗಬೇಕಾಗಿರುವುದು

(a) in the Court of the lowest grade competent to try
ವಿಚಾರಣೆ ನಡೆಸುವ ಸಾಮರ್ಥ್ಯ ಹೊಂದಿರುವ ಅತ್ಯಂತ ಕೆಳಹಂತದ ಸಕ್ಷಮ ನ್ಯಾಯಾಲಯದಲ್ಲಿ

(b) in the Court of the highest grade competent to try
ವಿಚಾರಣೆ ನಡೆಸುವ ಸಾಮರ್ಥ್ಯ ಹೊಂದಿರುವ ಅತ್ಯಂತ ಮೇಲಿನ ಹಂತದ ಸಕ್ಷಮ ನ್ಯಾಯಾಲಯದಲ್ಲಿ

(c) in either of the Courts
ಆ ಎರಡು ನ್ಯಾಯಾಲಯಗಳ ಪೈಕಿ ಯಾವುದೇ ಒಂದರಲ್ಲಿ

(d) in the Court of District Judge
ಜಿಲ್ಲಾನ್ಯಾಯಾಧೀಶರ ನ್ಯಾಯಾಲಯದಲ್ಲಿ

31. Plaint shall be rejected –
ವಾದಪತ್ರವನ್ನು ತಿರಸ್ಕರಿಸಬೇಕಾಗುತ್ತದೆ

(a) if it does not disclose a cause of action
ಅದು ವ್ಯಾಜ್ಯಕಾರಣವನ್ನು ತೋರಿಸದೇ ಇದ್ದಲ್ಲಿ

(b) where the cause of action pleaded appears to be false
ವಾದಿಸಿದ ವ್ಯಾಜ್ಯಕಾರಣ ತಪ್ಪೆಂದು ಕಂಡುಬಂದ ಪಕ್ಷದಲ್ಲಿ

(c) where there is no cause of action
ವ್ಯಾಜ್ಯಕಾರಣ ಇಲ್ಲದ ಪಕ್ಷದಲ್ಲಿ

(d) Both (a) and (c)
(ಎ) ಮತ್ತು (ಸಿ) ಗಳೆರಡೂ

32. A 'cognizable offence' means -
ಸಂಜ್ಞೇಯ ಅಪರಾಧವೆಂದರೆ,

(a) one which a Magistrate only can take cognizance
ದಂಡಾಧಿಕಾರಿ ಮಾತ್ರವೇ ಸಂಜ್ಞಾನ ಪಡೆಯುವುದಾಗಿರುತ್ತದೆ

(b) one which police only can take cognizance
ಆರಕ್ಷಕರು ಮಾತ್ರವೇ ಸಂಜ್ಞಾನ ಪಡೆಯುವುದಾಗಿರುತ್ತದೆ

(c) police can arrest without a warrant
ಬಂಧನಪತ್ರ (ವಾರೆಂಟ್) ಇಲ್ಲದೆಯೇ ಆರಕ್ಷಕರು ದಸ್ತಗಿರಿ ಮಾಡಬಹುದಾಗಿರುತ್ತದೆ

(d) police can arrest only with a warrant
ಬಂಧನಪತ್ರ (ವಾರೆಂಟ್) ಇದ್ದಲ್ಲಿ ಮಾತ್ರವೇ ಆರಕ್ಷಕರು ದಸ್ತಗಿರಿ ಮಾಡಬಹುದಾಗಿರುತ್ತದೆ

33. An order of maintenance passed under Section 125 Cr.P.C., -
ದಂಡ ಪ್ರಕ್ರಿಯಾಸಂಹಿತೆಯ ಕಲಂ ೧೨೫ ರಲ್ಲಿ ಮಾಡಲ್ಪಟ್ಟ ಜೀವನಾಂಶ ಕುರಿತಾಗಿನ ಆದೇಶವನ್ನು -

(a) cannot be altered
ಬದಲಾಯಿಸಲು ಸಾಧ್ಯವಿಲ್ಲ

(b) can be altered if change in circumstance is made out
ಸನ್ನಿವೇಶದಲ್ಲಿನ ಬದಲಾವಣೆ ತೋರಿಸಿದ ಪಕ್ಷದಲ್ಲಿ ಬದಲಾಯಿಸಬಹುದು

(c) can be altered on the death of the respondent
ಎದುರುದಾರನ/ಳ ನಿಧನದ ನಂತರ ಬದಲಾಯಿಸಬಹುದು

(d) can be altered on the death of the petitioner.
ಅರ್ಜಿದಾರನ/ಳ ನಿಧನದ ನಂತರ ಬದಲಾಯಿಸಬಹುದು

34. Statements of witnesses recorded under Section 164 Cr.P.C., can be used for -
ದಂಡಪ್ರಕ್ರಿಯಾ ಸಂಹಿತೆಯ ಕಲಂ ೧೬೪ರಡಿಯಲ್ಲಿ ದಾಖಲಿಸಿಕೊಂಡ ಸಾಕ್ಷಿಗಳ ಹೇಳಿಕೆಗಳನ್ನು ಈ ಕೆಳಗಿನದಕ್ಕೆ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ

(a) contradiction only
ಕೇವಲ ವಿರೋದೋಕ್ತಿಗಾಗಿ

(b) corroboration only
ಕೇವಲ ಪುಷ್ಟೀಕರಿಸುವುದಕ್ಕಾಗಿ

(c) both contradiction and corroboration
ವಿರೋದೋಕ್ತಿ ಹಾಗೂ ಪುಷ್ಟೀಕರಣ ಎರಡಕ್ಕೂ

(d) neither contradiction nor corroboration
ವಿರೋದೋಕ್ತಿಗೂ ಅಲ್ಲ ಪುಷ್ಟೀಕರಣಕ್ಕೂ ಅಲ್ಲ

35. Where number of documents are made by one uniform process -
ಬಹುಸಂಖ್ಯೆಯ ದಾಖಲೆಗಳನ್ನು ಏಕರೂಪದ ಪ್ರಕ್ರಿಯೆಯಡಿ ಮಾಡಲ್ಪಟ್ಟದ್ದಲ್ಲಿ -

(a) each is primary evidence of the contents of the rest
ಪ್ರತಿಯೊಂದೂ ಉಳಿದವುಗಳ ಒಳಾಂಶಗಳ ಪ್ರಾಥಮಿಕ ಸಾಕ್ಷ್ಯವಾಗಿರುತ್ತದೆ.

(b) when they are copies of a common original they are not primary evidence of the contents of the original
ಅವುಗಳು ಒಂದೇ ಸಾಮಾನ್ಯ ಅಸಲಿನ ಪ್ರತಿಗಳಾಗಿದ್ದಲ್ಲಿ ಅವುಗಳು ಮೂಲದಾಖಲೆಯ ಒಳಾಂಶಗಳ ಪ್ರಾಥಮಿಕ ಸಾಕ್ಷ್ಯವಾಗಲಾರದು

(c) Both (a) and (b) are correct
(ಎ) ಮತ್ತು (ಬಿ) ಎರಡೂ ಸರಿ

(d) None of the above
ಮೇಲಿನವುಗಳ ಪೈಕಿ ಯಾವುದೂ ಅಲ್ಲ

36. A lease of an immovable property from month to month for a purpose other than manufacturing purpose is terminable either by the lessor or lessee by issuing prior notice of -
ಉತ್ಪಾದನಾ ಉದ್ದೇಶದ ಹೊರತಾಗಿ ನೀಡಲ್ಪಡುವ ಸ್ಥಿರಾಸ್ತಿಯ ತಿಂಗಳಿನಿಂದ ತಿಂಗಳಿನ ಗುತ್ತಿಗೆಯನ್ನು ಗುತ್ತಿಗೆಗೆ ಕೊಡುವವ ಅಥವ ಬಾಡಿಗೆದಾರ ______ ದಿನಗಳ ಪೂರ್ವಭಾವಿ ತಿಳುವಳಿಕೆಯನ್ನು (ನೋಟೀಸು) ನೀಡುವುದರ ಮೂಲಕ ಕೊನೆಗೊಳಿಸಬಹುದಾಗಿರುತ್ತದೆ

(a) 30 days
೩೦ ದಿನಗಳು

(b) 15 days
೧೫ ದಿನಗಳು

(c) 60 days
೬೦ ದಿನಗಳು

(d) 90 days
೯೦ ದಿನಗಳು

37. Granting of a decree for specific performance is -
ನಿರ್ದಿಷ್ಟ ಪಾಲನೆಯ ಹುಕುಂನಾಮೆ ನೀಡುವಿಕೆಯು

(a) not mandatory on the court
ನ್ಯಾಯಾಲಯಕ್ಕೆ ಆಜ್ಞಾಪಕವಲ್ಲ

(b) discretionary
ವಿವೇಚನಾತ್ಮಕ

(c) not compulsory
ಕಡ್ಡಾಯವಲ್ಲ

(d) None of the above
ಮೇಲಿನವುಗಳ ಪೈಕಿ ಯಾವುದೂ ಅಲ್ಲ

38. An eviction petition is decided by a Court of Small Causes at Bengaluru. The aggrieved party can file -
ಖಾಲಿ ಮಾಡಿಸುವ ಅರ್ಜಿಯೊಂದು ಬೆಂಗಳೂರಿನ ಲಘು ವ್ಯವಹಾರಗಳ ನ್ಯಾಯಾಲಯದಲ್ಲಿ ತೀರ್ಮಾನಿಸಲ್ಪಟ್ಟಿದೆ. ಭಾದಿತ ವ್ಯಕ್ತಿಯು ಈ ಕೆಳಗಿನ ಪೈಕಿ ಯಾವುದನ್ನು ಹೂಡಬಹುದು?

(a) a revision petition to the High Court
ಉಚ್ಚನ್ಯಾಯಾಲಯದಲ್ಲಿ ಪರಿಷ್ಕರಣಾ ಅರ್ಜಿ

(b) a revision petition to the District Court
ಜಿಲ್ಲಾ ನ್ಯಾಯಾಲಯದಲ್ಲಿ ಪರಿಷ್ಕರಣಾ ಅರ್ಜಿ

(c) a Revision petition to the City Civil Court
ನಗರ ದಿವಾಣಿ (ಸಿವಿಲ್) ನ್ಯಾಯಾಲಯದಲ್ಲಿ ಪರಿಷ್ಕರಣಾ ಅರ್ಜಿ

(d) an appeal to the High Court
ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ

39. Who among the following has not been awarded the Jnanapeeta award-
ಈ ಕೆಳಗಿನವರ ಪೈಕಿ ಯಾರಿಗೆ ಜ್ಞಾನಪೀಠ ಪ್ರಶಸ್ತಿ ಬಂದಿರುವುದಿಲ್ಲ

(a) Masti Venkatesha Iyengar
ಮಾಸ್ತಿ ವೆಂಕಟೇಶ ಐಯಂಗಾರ್

(b) Kuvempu
ಕುವೆಂಪು

(c) U.R. Anantamurthy
ಯು.ಆರ್. ಅನಂತಮೂರ್ತಿ

(d) S.L. Byrappa
ಎಸ್. ಎಲ್. ಬೈರಪ್ಪ

40. Law Day falls on -
ಕಾನೂನು ದಿನಾಚರಣೆ ಆಚರಿಸುವ ದಿನ -

(a) 29th October
೨೯ ನೇ ಅಕ್ಟೋಬರ್

(b) 26th November
೨೬ ನೇ ನವೆಂಬರ್

(c) 26th January
೨೬ ನೇ ಜನವರಿ

(d) 15th August
೧೫ ನೇ ಆಗಸ್ಟ್

41. Which Article in Part IV of the Constitution provides for 'Promotion of Education and Economic Interest of the weaker section?
ಸಂವಿಧಾನದ ಭಾಗ IV ರ ಯಾವ ಅನುಚ್ಛೇದವು 'ದುರ್ಬಲ ವರ್ಗಗಳ ಶಿಕ್ಷಣದ ಉತ್ತೇಜನ ಮತ್ತು ಆರ್ಥಿಕ ಹಿತಾಸಕ್ತಿ' ಕುರಿತಾಗಿ ಹೇಳುತ್ತದೆ?

(a) 36
೩೬

(b) 46
೪೬

(c) 59
೫೯

(d) 69
೬೯

42. When dispute regarding relationship of landlord and tenant is raised, the Court has power to stop all further proceedings under certain circumstances. Which is the provision?
ಮಾಲೀಕ ಮತ್ತು ಬಾಡಿಗೆದಾರ ಸಂಬಂಧ ಕುರಿತಾಗಿನ ವಿವಾದವಿದ್ದ ಕೆಲವೊಂದು ಸನ್ನಿವೇಶಗಳಲ್ಲಿ ನ್ಯಾಯಾಲಯವು ಮುಂದಿನೆಲ್ಲಾ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸುವ ಅಧಿಕಾರಹೊಂದಿರುತ್ತದೆ. ಆ ಅವಕಾಶ ಯಾವುದು?

(a) Section 40
ಕಲಂ ೪೦

(b) Section 42
ಕಲಂ ೪೨

(c) Section 43
ಕಲಂ ೪೩

(d) Section 46
ಕಲಂ ೪೬

43. The doctrine of *res judicata* is based on certain principles. They are-
ಪೂರ್ವನ್ಯಾಯನಿರ್ಣಯ ಸಿದ್ಧಾಂತವು ಕೆಲವೊಂದು ತತ್ವಗಳನ್ನಾಧರಿಸಿದೆ. ಅವುಗಳೆಂದರೆ-

a) No man should be vexed twice for the same cause
ಒಂದೇ ಕಾರಣಕ್ಕಾಗಿ ವ್ಯಕ್ತಿಯೊಬ್ಬನನ್ನು ಎರಡುಬಾರಿ ಕಿರುಕುಳಕ್ಕೀಡುಮಾಡಬಾರದು

b) In the interest of the state there should be an end to the litigation
ರಾಜ್ಯದ ಹಿತಾಸಕ್ತಿಯ ಕಾರಣದಿಂದಾಗಿ ವ್ಯಾಜ್ಯಕ್ಕೆ ಕೊನೆಯಿರಬೇಕು

c) a judicial decision must be accepted as correct
ನ್ಯಾಯಿಕ ನಿರ್ಣಯವನ್ನು ಸರಿಯೆಂದು ಸ್ವೀಕರಿಸಬೇಕು

d) all of the above
ಮೇಲಿನೆಲ್ಲವುಗಳು

44. Set-off means-
ವಜಾಪಟ್ಟು ಎಂದರೆ-

(a) Amount paid by the decree-holder for detention of the judgment-debtor in civil prison
ಸಿವಿಲ್ ಕಾರಾಗೃಹದಲ್ಲಿ ತೀರ್ಪು ಋಣಿಯನ್ನು ಬಂಧಿಸಿಡಲು ಹುಕುಂ ನಾಮಧಾರಿಯು ನೀಡುವ ಮೊತ್ತ

(b) Adjustment of defendant's claim with the plaintiff's claim
ವಾದಿಯು ಕ್ಲೇಮಿನೊಂದಿಗೆ ಪ್ರತಿವಾದಿಯ ಕ್ಲೇಮಿನ ಹೊಂದಾಣಿಕೆ

(c) Gains from property by a person having wrongful Possession
ಅಕ್ರಮ ಸ್ವಾಧೀನ ಹೊಂದಿದ ವ್ಯಕ್ತಿ ಆಸ್ತಿಯಿಂದ ಪಡೆದ ಲಾಭ

(d) None of the above
ಮೇಲಿನವುಗಳ ಪೈಕಿ ಯಾವುದೂ ಅಲ್ಲ

45. Considerations and objects are unlawful when it is-
ಪ್ರತಿಫಲ ಮತ್ತು ಉದ್ದೇಶಗಳು _____ ಆಗಿದ್ದಾಗ ವಿಧಿ ವಿರುದ್ಧವಾಗಿರುತ್ತವೆ

(a) fraudulent
ಮೋಸದ

(b) forbidden by law or defeat provision of any law
ಕಾನೂನಿಂದ ನಿಷೇಧಿಸಲ್ಪಟ್ಟಾಗ ಅಥವಾ ಯಾವುದೇ ಕಾನೂನಿನ ಅವಕಾಶವನ್ನು ಸೋಲಿಸಿದಾಗ

(c) is immoral and against the public policy
ಅನೈತಿಕ ಹಾಗೂ ಸಾರ್ವಜನಿಕ ನೀತಿಗೆ ವಿರುದ್ಧವಾಗಿದ್ದಾಗ

(d) all the above
ಮೇಲಿನವುಗಳೆಲ್ಲವೂ

46. No Court shall make a declaration with regard to plaintiff's title to any legal character or to any right as to any property, where the plaintiff, being able to seek further relief than a mere declaration of title, omits to do so.
The aforesaid statement is___________
ವಾದಿಯು ಕೇವಲ ಸ್ವಾಮ್ಯದ ಘೋಷಣೆಗಿಂತ ಹೆಚ್ಚಿನ ಪರಿಹಾರ ಕೇಳಲು ಶಕ್ತನಾಗಿದ್ದರೂ ಸಹ ಕೇಳದೇ ಇದಲ್ಲಿ, ಸ್ವತ್ತೊಂದು ಕುರಿತಂತೆ ವಾದಿಯ ಸ್ವಾಮ್ಯದ ಕಾನೂನು ಸ್ವರೂಪ ಅಥವಾ ಯಾವುದೇ ಹಕ್ಕು ಕುರಿತಂತೆ ಯಾವುದೇ ನ್ಯಾಯಾಲಯ ಘೋಷಣೆ ಮಾಡುವುದಿಲ್ಲ.
ಮೇಲಿನ ಹೇಳಿಕೆಯು______

(a) false
ಸುಳ್ಳು

(b) partly true
ಭಾಗಶಃ ಸತ್ಯ

(c) true
ಸತ್ಯ

(d) none of the above
ಮೇಲಿನವುಗಳಲ್ಲಿ ಯಾವುದೂ ಅಲ್ಲ

47. The Constitution of India secures to all its citizens-
ಭಾರತದ ಸಂವಿದಾನವು ತನ್ನೆಲ್ಲಾ ನಾಗರೀಕರಿಗೆ ಇವುಗಳನ್ನು ದೊರೆಯುವಂತೆ ಮಾಡುತ್ತದೆ-

(a) Justice and Equality
ನ್ಯಾಯ ಮತ್ತು ಸಮಾನತೆ

(b) Liberty
ಸ್ವಾತಂತ್ರ್ಯ

(c) Fraternity
ಭ್ರಾತೃಭಾವನೆ

(d) All of the above
ಮೇಲಿನವುಗಳೆಲ್ಲವೂ

48. The Doctrine of 'Double Jeopardy' in Article 20(2) of the Constitution of India means-
ಭಾರತದ ಸಂವಿದಾನದ ಅನುಚ್ಛೇದ ೨೦(೨)ರಲ್ಲಿನ 'ದ್ವಿ ವಿಪತ್ತು' (ದ್ವಿ ಗಂಡಾಂತರ) ಸಿದ್ಧಾಂತದ ಅರ್ಥ-

(a) one can be tried several times for the same offence
ಒಂದೇ ಅಪರಾಧಕ್ಕಾಗಿ ಒಬ್ಬನನ್ನು ಅನೇಕ ಬಾರಿ ವಿಚಾರಣೆಗೊಳಪಡಿಸಬಹುದು

(b) punishment once awarded cannot be enhanced in appeal or revision
ಒಮ್ಮೆ ನೀಡಲ್ಪಟ್ಟ ಶಿಕ್ಷೆಯನ್ನು ಮೇಲ್ಮನವಿ ಅಥವ ಪರಿಷ್ಕರಣೆಯಲ್ಲಿ ಹೆಚ್ಚಿಸಲಾಗದು

(c) one can be tried more than once but punished only once
ಒಬ್ಬನನ್ನು ಒಂದಕ್ಕಿಂತ ಹೆಚ್ಚುಬಾರಿ ವಿಚಾರಣೆಗೊಳಪಡಿಸಬಹುದು ಆದರೆ ಒಂದೇಬಾರಿ ಶಿಕ್ಷಿಸಬಹುದು

(d) no one can be tried and punished more than once for the same offence
ಒಂದೇ ಅಪರಾಧಕ್ಕಾಗಿ ಯಾವುದೇ ಒಬ್ಬ ವ್ಯಕ್ತಿಯನ್ನು ಒಂದಕ್ಕಿಂತ ಹೆಚ್ಚುಬಾರಿ ವಿಚಾರಣೆಗೊಳಪಡಿಸುವಂತಿಲ್ಲ ಮತ್ತು ಶಿಕ್ಷಿಸುವಂತಿಲ್ಲ

49. Which of the following Articles of the Indian Constitution guarantees equal opportunities in public employment to citizens-
ಭಾರತದ ಸಂವಿದಾನದಲ್ಲಿ ಈ ಕೆಳಗಿನ ಯಾವ ಅನುಚ್ಛೆದಗಳು ಅದರ ನಾಗರೀಕರಿಗೆ ಸಾರ್ವಜನಿಕ ಉದ್ಯೋಗಗಳಲ್ಲಿ ಸಮಾನ ಅವಕಾಶಗಳ ಖಾತ್ರಿನೀಡುತ್ತದೆ

(a) Article 14
ಅನುಚ್ಛೆದ ೧೪

(b) Article 15
ಅನುಚ್ಛೆದ ೧೫

(c) Article 16
ಅನುಚ್ಛೆದ ೧೬

(d) Article 21
ಅನುಚ್ಛೆದ ೨೧

50. In which of the following cases, the Supreme Court has held that erring Prosecution and Investigating Officers must be proceeded against in case of unmerited acquittals and wrongful convictions?

ಗುಣಾಂಶವಿಲ್ಲದ ಖುಲಾಸೆಗಳು ಮತ್ತು ತಪ್ಪಿನಿಂದ ಕೂಡಿದ ಶಿಕ್ಷೆಗಳ ಪ್ರಕರಣಗಳಲ್ಲಿ ತಪ್ಪು ಮಾಡಿದ ಅಭಿಯೋಜನೆ ಮತ್ತು ತನಿಖಾಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕೆಂದು ಕೆಳಗಿನ ಯಾವ ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಹೇಳಿದೆ?

a) Hardeep Singh Vs. State of Punjab
ಹರ್‌ದೀಪ್ ಸಿಂಗ್ - ವಿರುದ್ಧ - ಪಂಜಾಬ್ ರಾಜ್ಯ

b) Mohd. Shafi Vs. Mohd. Rafiq
ಮೊಹಮದ್ ಶಫಿ - ವಿರುದ್ಧ – ಮೊಹಮದ್ ರಫೀಕ್

c) State of Gujarat Vs. Kishanbhai
ಗುಜರಾತ್ ರಾಜ್ಯ - ವಿರುದ್ಧ – ಕಿಷನ್ ಭಾಯ್

d) None of the above
ಮೇಲಿನವುಗಳಾವುವು ಅಲ್ಲ

51. The right of an accused to be defended by a legal practitioner of his choice commences when-
ತನ್ನ ಆಯ್ಕೆಯ ವಕೀಲರಿಂದ ಪ್ರತಿರಕ್ಷಿಸಲ್ಪಡುವ ಆರೋಪಿತನ ಹಕ್ಕು ಪ್ರಾರಂಭವಾಗುವುದು ಯಾವಾಗ ಎಂದರೆ-

(a) he is arrested
ಆತ ದಸ್ತಗಿರಿ ಆದಾಗ

(b) he is remanded
ಆತನನ್ನು ಬಂಧೀಖಾನೆಗೆ ಕಳುಹಿಸಿದಾಗ

(c) charge is framed
ದೋಷಾರೋಪಣೆ ರಚಿಸಿದಾಗ

(d) he pleads not guilty
ಆತ ತಪ್ಪು ಮಾಡಿಲ್ಲವೆಂದು ಹೇಳಿದಾಗ

52. Can a Court exercise the power of re-summoning any witness if once that power under Section 311 of Cr.P.C. has been exercised?
ದಂಡ ಪ್ರಕ್ರಿಯಾ ಸಂಹಿತೆಯ ಕಲಂ ೩೧೧ ರಡಿ ತನಗಿರುವ ಅಧಿಕಾರವನ್ನು ಚಲಾಯಿಸಿದ ನಂತರ ನ್ಯಾಯಾಲಯವು ಮತ್ತೆ ಸಾಕ್ಷಿಯನ್ನು ಪುನಃ ಕರೆಯಿಸುವ ಅಧಿಕಾರವನ್ನು ಚಲಾಯಿಸಬಹುದೇ?

(a) Yes
ಹೌದು

(b) No
ಇಲ್ಲ

(c) Only in Sessions cases
ಕೇವಲ ಸತ್ರ ಪ್ರಕರಣಗಳಲ್ಲಿ

(d) None of the above
ಮೇಲಿನವುಗಳಲ್ಲಿ ಯಾವುದೂ ಅಲ್ಲ

53. The Sexual Harassment of Women at Workplace (Prevention, `Prohibition and Redressal) Act, 2013 is known as ______
ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕೊಳ (ನಿರ್ಬಂಧ, ನಿಷೇಧ ಮತ್ತು ಪರಿಹಾರ) ಕಾಯ್ದೆ ೨೦೧೩ ನ್ನು ______ ಎಂದು ಕರೆಯಲಾಗುತ್ತದೆ

a) the Vishakha Act
ವಿಶಾಕ ಕಾಯ್ದೆ

b) the Nirbhaya Act
ನಿರ್ಭಯಾ ಕಾಯ್ದೆ

c) the Mathura Act
ಮಥುರಾ ಕಾಯ್ದೆ

d) none of the above
ಮೇಲಿನವುಗಳಲ್ಲಿ ಯಾವುದೂ ಅಲ್ಲ

54. Which of the following Section of the Indian Penal Code provides the punishment for voluntarily throwing or attempting to throw acid?
ಭಾರತ ದಂಡ ಸಂಹಿತೆಯಲ್ಲಿನ ಕೆಳಗಿನ ಯಾವ ಕಲಂ, ಸ್ವಯಂ ಪ್ರೇರಿತವಾಗಿ ಆಸಿಡ್ ಎರಚಿದ ಅಥವಾ ಎರಚುವ ಪ್ರಯತ್ನ ಮಾಡಿದ್ದಕ್ಕಾಗಿ ಶಿಕ್ಷೆಯನ್ನು ಒದಗಿಸುತ್ತದೆ

a) Section 326
ಕಲಂ ೩೨೬

b) Section 326A
ಕಲಂ ೩೨೬ ಎ

c) Section 326B
ಕಲಂ ೩೨೬ ಬಿ

d) Section 325A
ಕಲಂ ೩೨೫ ಎ

55. When one person has, by his declaration, act or omission, intentionally caused or permitted another person to believe a thing to be true and to act upon such belief, neither he nor his representative shall be allowed, in any suit or proceeding between

himself and such person or his representative, to deny the truth of that thing.
The above defines __________
ವ್ಯಕ್ತಿಯೊಬ್ಬನು ತನ್ನ ಘೋಷಣೆ, ಕೃತ್ಯ ಮಾಡುವಿಕೆ ಅಥವಾ ಮಾಡದಿರುವಿಕೆಯಿಂದ ಉದ್ದೇಶಪೂರ್ವಕವಾಗಿ ಉಂಟುಮಾಡಿದಲ್ಲಿ ಅಥವಾ ಬೇರೊಬ್ಬ ವ್ಯಕ್ತಿಯ ವಸ್ತು ಒಂದನ್ನು ನಿಜವೆಂದು ನಂಬುವಂತೆ ಮಾಡಿದ ಹಾಗೂ ಅಂತಹ ನಂಬಿಕೆಯ ಮೇಲೆ ಪ್ರವೃತ್ತನಾಗುವಂತೆ ಮಾಡಿದ ಅಥವಾ ಅದಕ್ಕೆ ಅವಕಾಶ ನೀಡಿದಲ್ಲಿ ಆ ವ್ಯಕ್ತಿಯಾಗಲಿ ಅಥವಾ ಆತನ ಪ್ರತಿನಿಧಿಯಾಗಲೀ ತನ್ನ ಮತ್ತು ಇನ್ನೊಬ್ಬ ವ್ಯಕ್ತಿ ಅಥವಾ ಆತನ ಪ್ರತಿನಿಧಿ ನಡುವಿನ ಯಾವುದೇ ದಾವೆ ಅಥವಾ ನಡವಳಿಯಲ್ಲಿ ಆ ವಸ್ತುವಿನ ಸತ್ಯವನ್ನು ಅಲ್ಲಗಳೆಯಲು ಅವಕಾಶವಿರುವುದಿಲ್ಲ.
ಮೇಲಿನದು ಈ ವಾಕ್ಯ ಕುರಿತು ಹೇಳುತ್ತದೆ_____

a) admission
ಒಪ್ಪಿಗೆ

b) Estoppel
ಪ್ರತಿಬಂಧ

c) Doctrine of Election
ಆಯ್ಕೆಯ ಸಿದ್ಧಾಂತ

d) none of the above
ಮೇಲಿನವುಗಳಾವುದೂ ಅಲ್ಲ

56. Secondary evidence means and includes-
ಎರಡನೇ ಪ್ರಕಾರದ ಸಾಕ್ಷ್ಯವೆಂದರೆ ಮತ್ತು ಅದು ಒಳಗೊಳ್ಳುತ್ತದೆ-

a) Oral accounts of the contents of a document given by some person who has himself seen it
ದಾಖಲೆಯನ್ನು ಸ್ವತಃ ನೋಡಿರುವ ವ್ಯಕ್ತಿಯೊಬ್ಬನಿಂದ ದಾಖಲೆಯ ಒಳಾಂಶಗಳ ಕುರಿತಾಗಿನ ವಿವರಣೆಗಳು

b) Copies made from or compared with the original
ಅಸಲು ದಾಖಲೆಯಿಂದ ಮಾಡಲ್ಪಟ್ಟ ಪ್ರತಿಗಳು ಅಥವಾ ಅಸಲಿನೊಂದಿಗೆ ಹೋಲಿಸಿ ನೋಡಿದ ದಾಖಲೆ

c) Counterparts of documents as against the parties who did not execute them
ದಾಖಲೆಗಳ ದ್ವಿಪ್ರತಿ (ಪ್ರತಿರೂಪ) ಗಳು - ಅವುಗಳನ್ನು ನೆರವೇರಿಸದೇ ಇರುವ ಪಕ್ಷಗಾರರ ವಿರುದ್ಧವಾಗಿ

d) All of the above
ಮೇಲಿನವುಗಳೆಲ್ಲವೂ

57. "Yatho Dharmasthatho Jaya" is the motto of -
"ಯತೋಧರ್ಮಸ್ತತೋ ಜಯ" ಎಂಬುದು _____ರ ಧ್ಯೇಯ ವಾಕ್ಯ

(a) C.B.I.
ಸಿ.ಬಿ.ಐ.

(b) Supreme Court of India
ಭಾರತದ ಸರ್ವೋಚ್ಚ ನ್ಯಾಯಾಲಯ

(c) Delhi Police
ದೆಹಲಿ ಆರಕ್ಷಕರು

(d) None of the above
ಮೇಲಿನವುಗಳಾವುವೂ ಅಲ್ಲ

58. The expression "dying intestate" refers to -
"ಮರಣ ಶಾಸನವಿಲ್ಲದೆಯೇ ಸಾಯುವುದು" ಎಂಬುದು -

(a) Dying without making a will
ಉಯಿಲು ಮಾಡದೆಯೇ ಮರಣ ಹೊಂದುವುದು

(b) Dying without legal heirs
ವಾರಸುದಾರರಿಲ್ಲದೆಯೇ ಮರಣ ಹೊಂದುವುದು

(c) Dying without any property
ಯಾವುದೇ ಆಸ್ತಿ ಇಲ್ಲದೆಯೇ ಮರಣ ಹೊಂದುವುದು

(d) None of the above
ಮೇಲಿನವುಗಳಾವುವೂ ಅಲ್ಲ

59. A lawyer appointed by a court to assist it, is called-
ತನಗೆ ಸಹಾಯ ಮಾಡಲು ನ್ಯಾಯಾಲಯ ನೇಮಿಸುವ ವಕೀಲರನ್ನು _____ ಎಂದು ಕರೆಯುತ್ತಾರೆ

(a) Amicus Curiae
ನ್ಯಾಯಾಲಯ ಮಿತ್ರ

(b) Court Assistant
ನ್ಯಾಯಾಲಯ ಸಹಾಯಕ

(c) Public Prosecutor
ಸಾರ್ವಜನಿಕ ಅಭಿಯೋಜಕ

(d) Defence Counsel
ಪ್ರತಿರಕ್ಷಾ ವಕೀಲ

60. A confession statement under Section 164 Cr.P.C., can be recorded by a -
ದಂಡಪ್ರಕ್ರಿಯಾ ಸಂಹಿತೆಯ ಕಲಂ ೧೬೪ರಡಿಯಲ್ಲಿ ಒಪ್ಪಿಗೆ ಹೇಳಿಕೆಯನ್ನು ದಾಖಲಿಸಿಕೊಳ್ಳಬಹುದಾದವರೆಂದರೆ,

(a) Magistrate
ದಂಡಾಧಿಕಾರಿ

(b) Sessions Judge.
ಸತ್ರ ನ್ಯಾಯಾಧೀಶ

(c) Police officer.
ಆರಕ್ಷಕ ಅಧಿಕಾರಿ

(d) Any of the above.
ಮೇಲಿನವರ ಪೈಕಿ ಯಾರಾದರೂ

61. Voluntarily causing grievous hurt, which is an offence punishable under Section 325 Indian Penal Code can be -
ಭಾರತ ದಂಡ ಸಂಹಿತೆಯ ಕಲಂ ೩೨೫ರಡಿ ಶಿಕ್ಷಿಸಲ್ಪಡಬಹುದಾದ ಅಪರಾಧವಾದ ಸ್ವಪ್ರೇರಣೆಯಿಂದ ತೀವ್ರಗಾಯವನ್ನುಂಟುಮಾಡುವುದನ್ನು -

(a) compounded by the person to whom hurt is caused
ಯಾರಿಗೆ ಗಾಯವುಂಟಾಗಿದೆಯೋ ಆ ವ್ಯಕ್ತಿಯಿಂದ ರಾಜಿ ಮಾಡಿಕೊಳ್ಳಬಹುದಾಗಿರುತ್ತದೆ.

(b) compounded by the Public Prosecutor
ಸಾರ್ವಜನಿಕ ಅಭಿಯೋಜಕರಿಂದ ರಾಜಿ ಮಾಡಿಕೊಳ್ಳಬಹುದಾಗಿರುತ್ತದೆ.

(c) compounded with the permission of the Court
ನ್ಯಾಯಾಲಯದ ಅನುಮತಿ ಮೇರೆಗೆ ರಾಜಿ ಮಾಡಿಕೊಳ್ಳಬಹುದಾಗಿರುತ್ತದೆ.

(d) Both (a) and (c)
(ಎ) ಮತ್ತು (ಸಿ) ಗಳೆರಡೂ

62. A public document can be proved –
ಸಾರ್ವಜನಿಕ ದಸ್ತಾವೇಜೊಂದನ್ನು ಈ ಕೆಳಗಿನವರ ಮೂಲಕ ಸಾಬೀತು ಪಡಿಸಬಹುದಾಗಿರುತ್ತದೆ

(a) by production of the original document
ಮೂಲದಸ್ತಾವೇಜನ್ನು ಹಾಜರುಪಡಿಸುವುದರ ಮೂಲಕ

(b) by examining the officer in custody of the public document
ಸಾರ್ವಜನಿಕ ದಸ್ತಾವೇಜಿನ ಸುಪರ್ದಿ ಹೊಂದಿರುವ ಅಧಿಕಾರಿಯ ವಿಚಾರಣೆಯ ಮೂಲಕ

(c) by producing a certified copy of the public document
ಸಾರ್ವಜನಿಕ ದಸ್ತಾವೇಜಿನ ದೃಢೀಕೃತ ನಕಲನ್ನು ಹಾಜರುಪಡಿಸುವುದರ ಮೂಲಕ

(d) by any of the above modes
ಮೇಲಿನವುಗಳ ಪೈಕಿ ಯಾವುದರ ಮೂಲಕವಾದರೂ

63. Which one of the following is not a transfer of property -
ಕೆಳಗಿನವುಗಳ ಪೈಕಿ ಯಾವುದು ಆಸ್ತಿಯ ವರ್ಗಾವಣೆ ಆಗುವುದಿಲ್ಲ -

(a) Gift
ಉಡುಗೊರೆ

(b) Sale
ಮಾರಾಟ

(c) Will
ಉಯಿಲು

(d) Exchange
ಬದಲಾವಣೆ

64. In the event of death of a tenant, the right of tenancy devolves upon the -
ಬಾಡಿಗೆದಾರನ ನಿಧನದ ಸಂದರ್ಭದಲ್ಲಿ ಬಾಡಿಗೆಯ ಹಕ್ಕು ____ರಿಗೆ ಪ್ರಾಪ್ತವಾಗುತ್ತದೆ -

(a) Class-I heirs
೧ ನೇ ಶ್ರೇಣಿಯ ವಾರಸುದಾರರಿಗೆ

(b) legal representatives
ವಿಧಿಸಮ್ಮತ ಪ್ರತಿನಿಧಿಗಳಿಗೆ

(c) assignees
ಹಸ್ತಾಂತರಗ್ರಾಹಿಗಳಿಗೆ

(d) Successors who were depending on the deceased tenant at the time of his death
ಮೃತಬಾಡಿಗೆದಾರನ ನಿಧನದ ಸಂದರ್ಭದಲ್ಲಿ ಅವನ ಮೇಲೆ ಅವಲಂಬಿತರಾಗಿದ್ದ ಉತ್ತರಾಧಿಕಾರಿಗಳಿಗೆ

65. Compounding of offence under the Negotiable Instruments Act 1881 is controlled by -
ವರ್ಗಾವಣೀಯ ಲಿಖಿತಗಳ ಅಧಿನಿಯಮ ೧೮೮೧ ರಡಿ ಅಪರಾಧದ ರಾಜಿ ಮಾಡಿಕೊಳ್ಳುವಿಕೆ ______ರಿಂದ ನಿಯಂತ್ರಿಸಲ್ಪಡುತ್ತದೆ

(a) the scheme under Section 320 Cr.P.C.
ದಂಡ ಪ್ರಕ್ರಿಯಾಸಂಹಿತೆಯ ಕಲಂ ೩೨೦ ರಡಿಯಲ್ಲಿನ ಯೋಜನೆಯಿಂದ

(b) Section 147 of the Negotiable Instruments Act
ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ ೧೪೭ ರಿಂದ

(c) the scheme under Section 320 Cr.P.C., read with Section 147 of the Negotiable Instruments Act
ದಂಡ ಪ್ರಕ್ರಿಯಾಸಂಹಿತೆಯ ಕಲಂ ೩೨೦ ರಲ್ಲಿನ ಯೋಜನೆ ಸದವಾಚಕ ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ ೧೪೭ ರಿಂದ

(d) Section 145 of the Negotiable Instruments Act
ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ ೧೪೫

66. Whoever, being legally bound by an oath or by an express provision of law to state the truth, or being bound by law to make a declaration upon any subject, makes any statement which is false, and which he either knows or believes to be false or does not believe to be true, is said to have committed -
ಕಾನೂನಾತ್ಮಕವಾಗಿ ಶಪಥಪತ್ರದ ಮೂಲಕ ಅಥವ ಕಾನೂನಿನ ಸ್ಪಷ್ಟ ಅವಕಾಶದಡಿ ಯಾವುದೇ ವ್ಯಕ್ತಿ ಸತ್ಯವನ್ನು ಹೇಳುವುದಕ್ಕೆ ಬದ್ಧನಾಗಿದ್ದು ಅಥವಾ ಯಾವುದೇ ವಿಷಯ ಕುರಿತಂತೆ ಘೋಷಣೆಮಾಡಲು ವಿಧಿಬದ್ಧನಾಗಿದ್ದು, ಅಸತ್ಯವಾದ ಮತ್ತು ಅಸತ್ಯವೆಂದು ತನಗೆ ತಿಳಿದಿರುವ ಅಥವಾ ನಂಬಿರುವ ಅಥವ ಸತ್ಯವೆಂದು ನಂಬದೇಯಿರುವ ಹೇಳಿಕೆಯನ್ನು ನೀಡಿದಲ್ಲಿ ಅವನನ್ನು ____ ಎಸಗಿದ್ದಾನೆ ಎಂದು ಹೇಳಲಾಗುತ್ತದೆ.

(a) contempt of court
ನ್ಯಾಯಾಲಯದ ನಿಂದನೆ

(b) an offence of giving false evidence
ಅಸತ್ಯದ ಹೇಳಿಕೆ ನೀಡಿದ ಅಪರಾಧ

(c) an offence of fabricating false evidence
ಅಸತ್ಯ ಸಾಕ್ಷ್ಯದ ರಚನೆಯ ಅಪರಾಧ

(d) None of the above
ಮೇಲಿನದಾವುದೂ ಅಲ್ಲ

67. A Magistrate finds an accused guilty of commission of an offence punishable under Section 324 Indian Penal Code. The sentence which the Magistrate can impose is-
ಆರೋಪಿತನು ಭಾರತ ದಂಡ ಸಂಹಿತೆ ಕಲಂ ೩೨೪ ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದಾನೆಂಬುದನ್ನು ದಂಡಾಧಿಕಾರಿಗಳು ಕಂಡುಕೊಳ್ಳುತ್ತಾರೆ. ದಂಡಾಧಿಕಾರಿ ವಿಧಿಸಬಹುದಾದ ಶಿಕ್ಷೆಯೆಂದರೆ -

(a) imprisonment for a minimum term of 3 years
ಕನಿಷ್ಠ ೩ ವರ್ಷಗಳ ಅವಧಿಯ ಜೈಲು ಶಿಕ್ಷೆ

(b) imprisonment which may extent to 3 years
೩ ವರ್ಷಗಳ ವರೆಗಿನ ಜೈಲು ಶಿಕ್ಷೆ

(c) imprisonment which may extent to 3 years or fine or with both
೩ ವರ್ಷಗಳ ವರೆಗಿನ ಜೈಲು ಶಿಕ್ಷೆ ಅಥವಾ ಜುಲ್ಮಾನೆ ಅಥವಾ ಎರಡು

(d) imprisonment for a term not less than 2 years and not exceeding 3 years
೨ ವರ್ಷಗಳಿಗೆ ಕಡಿಮೆಯಿಲ್ಲದ ಮತ್ತು ೩ ವರ್ಷ ಮೀರದ ಜೈಲು ಶಿಕ್ಷೆ

68. A agrees to sell to B 100 tons of oil. For what reason this agreement is void?
ಎ ಯು ಬಿ ಗೆ ೧೦೦ ಟನ್ ತೈಲ ಮಾರಾಟ ಮಾಡಲು ಒಪ್ಪಿರುತ್ತಾನೆ. ಯಾವ ಕಾರಣಕ್ಕಾಗಿ ಈ ಒಂಪದವು ಶೂನ್ಯವಾಗುತ್ತದೆ?

(a) Contingent
ಅವಲಂಬಿತ (ಕಂಟಿಂಜೆಂಟ್)

(b) Ages of A and B are not mentioned
ಎ ಮತ್ತು ಬಿ ಅವರ ವಯಸ್ಸನ್ನು ನಮೂದಿಸಲಾಗಿಲ್ಲ

(c) Uncertainty
ಅನಿಶ್ಚಿಂತತೆ

(d) All the above
ಮೇಲಿನೆಲ್ಲವುಗಳು

69. An agreement made without consideration is void, unless -
ಪ್ರತಿಫಲವಿಲ್ಲದೆಯೇ ಮಾಡಲ್ಪಟ್ಟ ಒಪ್ಪಂದವು ಶೂನ್ಯ ಎಂಬುದಕ್ಕೆ ಅಪವಾದವೆಂದರೆ _

(a) it is an oral promise to the creditor to pay a time-barred debt
ಅದು ಕಾಲ ಮಿತಿಮೀರಿದ ಸಾಲವನ್ನು ಸಾಲ ನೀಡಿದವನಿಗೆ ನೀಡಲು ಕೊಟ್ಟ ಮೌಖಿಕ ವಚನವಾದಾಗ

(b) it is a promise to gift
ಅದು ಉಡುಗೊರೆ ನೀಡುವ ವಚನವಾಗಿದ್ದಲ್ಲಿ

(c) it is for creation of an agency
ಅದು ಕತೃತ್ವ (ಏಜೆನ್ಸಿ)ದ ರಚನೆಯಾಗಿದ್ದಲ್ಲಿ

(d) it is a promise in writing and registered between the parties who are not related
ಅದು ಪರಸ್ಪರ ಸಂಬಂಧವಿಲ್ಲದ ಪಕ್ಷಗಾರರ ನಡುವೆ ಲಿಖಿತವಾಗಿದ್ದು ನೊಂದಣಿಯಾದ ವಚನರೂಪದಲ್ಲಿದ್ದಾಗ

70. The power of the Court to put questions or order production of documents is found in-
ಪ್ರಶ್ನಿಸುವ ಅಥವಾ ದಾಖಲೆಗಳನ್ನು ಹಾಜರುಪಡಿಸಲು ಆದೇಶಿಸುವ ನ್ಯಾಯಾಲಯದ ಅಧಿಕಾರವನ್ನು ______ ರಲ್ಲಿ ಕಾಣಬಹುದಾಗಿರುತ್ತದೆ

(a) Section 148 of Evidence Act
ಸಾಕ್ಷ್ಯ ಅಧಿನಿಯಮದ ಕಲಂ ೧೪೮

(b) Section 150 of Evidence Act
ಸಾಕ್ಷ್ಯ ಅಧಿನಿಯಮದ ಕಲಂ ೧೫೦

(c) Section 165 of Evidence Act
ಸಾಕ್ಷ್ಯ ಅಧಿನಿಯಮದ ಕಲಂ ೧೬೫

(d) No such power is vested in the Court
ಅಂತಹ ಅಧಿಕಾರ ನ್ಯಾಯಾಲಯಕ್ಕೆ ಇರುವುದಿಲ್ಲ

71. At present right to property is a -
ಆಸ್ತಿಕುರಿತಾಗಿನ ಹಕ್ಕುದಾರಿ

(a) Constitutional Right
ಸಂವಿಧಾನಾತ್ಮಕ ಹಕ್ಕು

(b) Fundamental Right
ಮೂಲಭೂತ ಹಕ್ಕು

(c) Human Right
ಮಾನವೀಯ ಹಕ್ಕು

(d) Natural Right
ಸ್ವಾಭಾವಿಕ ಸಹಜ ಹಕ್ಕು

72. Voyeurism as an offence means-
ಅಪರಾಧವಾಗಿ ವಾಯರಿಸಮ್ (ಲೈಂಗಿಕ ದರ್ಶನ ತೃಪ್ತಿ) ಎಂದರೆ-

(a) A man watching or capturing the image of a woman in private act
ವ್ಯಕ್ತಿಯೊಬ್ಬನು ಮಹಿಳೆಯ ಏಕಾಂತ ಕ್ರಿಯೆಯನ್ನು ಗಮನಿಸುವುದು ಅಥವಾ ಚಿತ್ರದಲ್ಲಿ ಸೆರೆ ಹಿಡಿಯುವುದು

(b) Eve teasing
ಸ್ತ್ರೀಯನ್ನು ಚುಡಾಯಿಸುವುದು

(c) Sexual harassment
ಲೈಂಗಿಕ ಕಿರುಕುಳ

(d) Molestation
ಪೀಡಿಸುವಿಕೆ

73. Generally before granting an order of temporary injunction, the court must be satisfied about which of the following aspects-
ತಾತ್ಕಾಲಿಕ ನಿರ್ಭಂದಾಜ್ಞೆ ಆದೇಶ ನೀಡುವ ಮುನ್ನ ಸಾಮಾನ್ಯವಾಗಿ ನ್ಯಾಯಾಲಯವು ಈ ಕೆಳಗಿನ ಯಾವ ಅಂಶಗಳಿಂದ ಸಂತೃಪ್ತಿ ಪಡಬೇಕಾಗಿರುತ್ತದೆ

a) prima facie case
ಮೇಲ್ನೋಟಕ್ಕೆ ಮೂಡಿಬಂದ ಪ್ರಕರಣ

b) irreparable injury
ಸರಿಪಡಿಸಲಾಗದ ಘಾಸಿ

c) balance of convenience
ಅನುಕೂಲತೆಯ ತುಲನೆ

d) all of the above
ಮೇಲಿನೆಲ್ಲವುಗಳು

74. "The question of title is irrelevant in a suit under Section 6 of the Specific Relief Act, 1963". This statement is-
"ನಿರ್ದಿಷ್ಟ ಪರಿಹಾರ ಅಧಿನಿಯಮ ೧೯೬೩ ಕಲಂ ೬ ರಡಿಯಲ್ಲಿ ಸ್ವಾಮ್ಯದ ಪ್ರಶ್ನೆ ಅಸಂಬಂಧವಾಗಿರುತ್ತದೆ". ಈ ಹೇಳಿಕೆಯು-

(a) True
ಸರಿ

(b) false
ತಪ್ಪು

(c) partly true
ಭಾಗಶಃ ಸರಿ

(d) None of the above
ಈ ಯಾವುದೂ ಅಲ್ಲ

75. An agency is terminated-
ಕತೃತ್ವವು (ಏಜೆನ್ಸಿ) ಈ ರೀತಿಯಾಗಿ ಕೊನೆಗೊಳ್ಳುತ್ತದೆ-

(a) by the principal revoking the authority
ಪ್ರಮುಖನು ಅಧಿಕಾರವನ್ನು ಹಿಂಪಡೆಯುವುದರ ಮೂಲಕ

(b) by the agent renouncing the business of the agency
ಕರ್ತ/ಕಾರಭಾರಿಯು ಕತೃತ್ವದ ವ್ಯವಹಾರವನ್ನು ಪರಿತ್ಯಜಿಸುವುದರ ಮೂಲಕ

(c) by either the principal or agent dying or becoming of unsound mind
ಪ್ರಮುಖನಾಗಲಿ ಅಥವಾ ಕರ್ತ/ಕಾರಭಾರಿಯಾಗಲಿ ನಿಧನ ಹೊಂದುವುದರಿಂದ ಅಥವ ಬುದ್ಧಿ ಭ್ರಮಣೆ ಹೊಂದುವುದರಿಂದ

(d) all the above
ಮೇಲಿನವುಗಳೆಲ್ಲವೂ

76. Causing death by rash or negligent act is ____________
ದುಡುಕು ಅಥವಾ ನಿರ್ಲಕ್ಷ್ಯದ ಕೃತ್ಯದಿಂದ ಮರಣವನ್ನುಂಟುಮಾಡುವುದು_____

(a) a bailable offence
ಒಂದು ಜಾಮೀನೀಯವಾದ ಅಪರಾಧ

(b) non-bailable offence
ಜಾಮೀನೀಯವಲ್ಲದ ಅಪರಾಧ

(c) non-cognizable offence
ಸಂಜ್ಞೇಯತೆ ಪಡೆಯಲಾಗದ ಅಪರಾಧ

(d) cognizable and non-bailable offence
ಸಂಜ್ಞೇಯ ಹಾಗೂ ಜಾಮೀನೀಯವಲ್ಲದ ಅಪರಾಧ

77. The guidelines regarding the arrest of judicial officers by the police were issued by the Supreme Court in-
ಆರಕ್ಷಕರಿಂದ ನ್ಯಾಯಾಂಗ ಅಧಿಕಾರಿಗಳ ದಸ್ತಗಿರಿ ಕುರಿತಂತೆ ಮಾರ್ಗದರ್ಶನವನ್ನು ಸರ್ವೋಚ್ಚ ನ್ಯಾಯಾಲಯವು ಕೆಳಗಿನ ಯಾವ ಪ್ರಕರಣದಲ್ಲಿ ನೀಡಿದೆ

a) Joginder Kumar Vs. State of Uttar Pradesh
ಜೋಗೀಂದರ್ ಕುಮಾರ್ - ವಿರುದ್ಧ – ಉತ್ತರಪ್ರದೇಶ ರಾಜ್ಯ

b) M.C.Abraham Vs. State of Maharashtra
ಎಂ.ಸಿ. ಅಬ್ರಾಹಂ - ವಿರುದ್ಧ - ಮಹಾರಾಷ್ಟ್ರ ರಾಜ್ಯ

c) D.K.Basu Vs. State of West Bengal
ಡಿ.ಕೆ. ಬಸು - ವಿರುದ್ಧ - ಪಶ್ಚಿಮ ಬಂಗಾಳ ರಾಜ್ಯ

d) Delhi Judicial Service Association Vs. State of Gujarat
ಡೆಲ್ಲಿ ಜುಡಿಷಿಯಲ್ ಸರ್ವಿಸ್ ಅಸೋಸಿಯೇಷನ್- ವಿರುದ್ಧ – ಗುಜರಾತ್ ರಾಜ್ಯ

78. A sentence of death by Sessions Court-
ಸತ್ರ ನ್ಯಾಯಾಲಯವು ನೀಡುವ ಮರಣದಂಡನೆ ಶಿಕ್ಷೆಯು-

a) must be confirmed by High Court
ಉಚ್ಚನ್ಯಾಯಾಲಯದಿಂದ ಖಚಿತಗೊಳ್ಳಬೇಕು

b) must be confirmed by Supreme Court
ಸರ್ವೋಚ್ಛ ನ್ಯಾಯಾಲಯದಿಂದ ಖಚಿತಗೊಳ್ಳಬೇಕು

c) must be confirmed by President
ರಾಷ್ಟ್ರಪತಿಗಳಿಂದ ಖಚಿತಗೊಳ್ಳಬೇಕು

d) must be confirmed by Governor
ರಾಜ್ಯಪಾಲರಿಂದ ಖಚಿತಗೊಳ್ಳಬೇಕು

79. Every person who is arrested or detained is required to be produced before the nearest Magistrate within a period of-
ದಸ್ತಗಿರಿಯಾದ ಅಥವಾ ಬಂಧಿಸಲ್ಪಟ್ಟ ಪ್ರತಿಯೊಬ್ಬ ವ್ಯಕ್ತಿಯನ್ನು ______ ಗಂಟೆಗಳೊಳಗಾಗಿ ಸಮೀಪದ ದಂಡಾಧಿಕಾರಿಗಳೆದುರು ಹಾಜರು ಪಡಿಸಬೇಕು

(a) 24 hours
೨೪ ಗಂಟೆಗಳು

(b) 48 hours
೪೮ ಗಂಟೆಗಳು

(c) 72 hours
೭೨ ಗಂಟೆಗಳು

(d) None of these
ಮೇಲಿನವುಗಳಲ್ಲಿ ಯಾವುದೂ ಅಲ್ಲ

80. To establish Section 34 of Indian Penal Code –
ಭಾರತ ದಂಡ ಸಂಹಿತೆಯಲ್ಲಿ ಕಲಂ ೩೪ನ್ನು ಸಿದ್ಧ ಪಡಿಸಲು –

(a) common intention and overt act, both are to be proved
ಏಕೋದ್ದೇಶ ಮತ್ತು ಗೋಚರವಾದ ಕೃತ್ಯಗಳೆರಡನ್ನು ಸಾಬೀತು ಪಡಿಸಬೇಕು

(b) common intention to be proved but overt act need not be proved
ಏಕೋದ್ದೇಶವನ್ನು ಸಾಬೀತು ಪಡಿಸಬೇಕು ಆದರೆ ಗೋಚರವಾದ ಕೃತ್ಯವನ್ನು ಸಾಬೀತುಪಡಿಸುವ ಅಗತ್ಯವಿಲ್ಲ

(c) common intention need not be proved but overt act to be proved
ಏಕೋದ್ದೇಶವನ್ನು ಸಾಬೀತು ಪಡಿಸುವ ಅಗತ್ಯವಿಲ್ಲ ಆದರೆ ಗೋಚರವಾಗುವ ಕೃತ್ಯವನ್ನು ಸಾಬೀತು ಪಡಿಸಬೇಕು

(d) all the above
ಮೇಲಿನವುಗಳೆಲ್ಲವೂ

81. Objections as to the admissibility of a document in evidence can be-
ಸಾಕ್ಷ್ಯದಲ್ಲಿ ದಾಖಲೆಯೊಂದರ ಅಂಗೀಕಾರ್ಹತೆ ಕುರಿತಾಗಿ ಆಕ್ಷೇಪಗಳನ್ನು-

(a) made at the first opportunity when the document is tendered in evidence
ಸಾಕ್ಷ್ಯದಲ್ಲಿ ದಾಖಲೆಯನ್ನು ಹಾಜರುಪಡಿಸಿದ ಮೊದಲನೆಯ ಅವಕಾಶದಲ್ಲಿಯೇ ಮಾಡಬೇಕು

(b) can be made at any stage during the trial
ಅಧಿವಿಚಾರಣೆಯ ಯಾವುದೇ ಹಂತದಲ್ಲಿ ಮಾಡಬಹುದು

(c) raised for the first time in appeal
ಮೇಲ್ಮನವಿಯಲ್ಲಿ ಮೊದಲಬಾರಿಗೆ ಎತ್ತಬಹುದಾಗಿರುತ್ತದೆ

(d) all the above
ಮೇಲಿನವುಗಳೆಲ್ಲವೂ

82. The first Indian woman to climb Mt. Everest was ____
ಗೌರೀಶಂಕರ ಶಿಖರ (ಎವೆರೆಸ್ಟ್ ಶಿಖರ) ವನ್ನು ಮೊದಲಬಾರಿಗೆ ಏರಿದ ಭಾರತೀಯ ಮಹಿಳೆಯೆಂದರೆ

(a) Hillary
ಹಿಲೇರಿ

(b) Tenzing
ತೇನ್‌ಸಿಂಗ್

(c) Junko Tabei
ಜುಂಕೋ ತಾಬೈ

(d) Bachhendri Pal
ಬಚ್ಚೇಂದ್ರಿಪಾಲ್

83. "All human beings are born free and equal in dignity and rights. They are endowed with reason and conscience and should act towards one another in a spirit of brotherhood". This statement is contained in Article I of -

"ಎಲ್ಲಾ ಮನುಷ್ಯರು ಹುಟ್ಟನಿಂದ ಸ್ವತಂತ್ರ್ಯರು ಮತ್ತು ಗೌರವ ಹಾಗೂ ಹಕ್ಕುಗಳಲ್ಲಿ ಸಮಾನರು. ಅವರು ತರ್ಕಶಕ್ತಿ (ಕಾರಣ ಕ್ರಿಯ) ಹಾಗೂ ವಿವೇಕ (ಆತ್ಮಸಾಕ್ಷಿ) ಗಳನ್ನು

ಹೊಂದಿರುವವರಾಗಿದ್ದಾರೆ ಮತ್ತು ಭ್ರಾತೃಭಾವನೆಯೊಂದಿಗೆ ಪರಸ್ಪರ ವರ್ತಿಸಬೇಕು." ಈ ಹೇಳಿಕೆಯು _____ರ ಅನುಚ್ಛೇದ ೧ ರಲ್ಲಿದೆ

(a) Bill of Rights
ಬಿಲ್ ಆಫ್ ರೈಟ್ಸ್(ಹಕ್ಕುಗಳ ಒಡಂಬಡಿಕೆ)

(b) Universal Declaration of Human Rights
ಮಾನವ ಹಕ್ಕುಗಳ ವಿಶ್ವ ಒಡಂಬಡಿಕೆ

(c) US Constitution
ಅಮೆರಿಕಾ (ಸಮ್ಯುಕ್ತ ಸಂಸ್ಥಾನ)ದ ಸಂವಿಧಾನ

(d) None of the above
ಮೇಲಿನವುಗಳಾವುವೂ ಅಲ್ಲ

84. 'Corroborative evidence' means-
'ಪುಷ್ಟೀಕರಣ ಸಾಕ್ಷ್ಯ' ಎಂದರೆ

(a) Main evidence in a case
ಪ್ರಕರಣದಲ್ಲಿನ ಮುಖ್ಯ ಸಾಕ್ಷ್ಯಾ

(b) Evidence which supports other evidence
ಇತರೆ ಸಾಕ್ಷ್ಯಗಳನ್ನು ಬೆಂಬಲಿಸುವ ಸಾಕ್ಷ್ಯ

(c) Evidence that proves the guilt of an accused person
ಆರೋಪಿತ ವ್ಯಕ್ತಿಯ ತಪ್ಪನ್ನು ಸಾಬೀತು ಪಡಿಸುವ ಸಾಕ್ಷ್ಯ

(d) Evidence of a person who supports the accused
ಆರೋಪಿತನನ್ನು ಬೆಂಬಲಿಸುವ ವ್ಯಕ್ತಿಯ ಸಾಕ್ಷ್ಯ

85. Interpretation of Statute means-
ಶಾಸನಗಳ ಅರ್ಥ ವಿವರಣೆ ಎಂದರೆ-

(a) Finding legislative intent and true meaning of words used by legislators
ಶಾಸನದ ಉದ್ದೇಶವನ್ನು ಹಾಗೂ ಶಾಸನಕಾರರು ಉಪಯೋಗಿಸುವ ಶಬ್ದಗಳ ನಿಜವಾದ ಅರ್ಥವನ್ನು ಕಂಡುಕೊಳ್ಳುವುದು

(b) Finding of substitute words in legislation;
ಶಾಸನದಲ್ಲಿನ ಪರ್ಯಾಯ ಪದಗಳನ್ನು ಹುಡುಕುವುದು

(c) Comparative words in the legislation;
ಶಾಸನದಲ್ಲಿನ ಹೋಲಿಕೆ ನೋಡಬಹುದಾದ ಶಬ್ದಗಳು

(d) Re-writing the statute by the Court
ನ್ಯಾಯಾಲಯಗಳು ಶಾಸನವನ್ನು ಪುನಃ ಬರೆಯುವುದು

86. Section 114 of the Evidence Act provides for certain -
ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ ೧೧೪ ಯಾವುದನ್ನು ಒದಗಿಸುವುದೆಂದರೆ-

(a) presumption of fact
ಸಂಗತಿಯ ಪೂರ್ವ ಭಾವನೆ

(b) rebuttable presumptions of law
ಖಂಡಿಸಬಹುದಾದ ಕಾನೂನಿನ ಪೂರ್ವ ಭಾವನೆ

(c) irrebuttable presumptions of law
ಖಂಡಿಸಲಾರದಂತಹ ಕಾನೂನಿನ ಪೂರ್ವ ಭಾವನೆ

(d) none of the above
ಈ ಮೇಲಿನ ಯಾವುದೂ ಅಲ್ಲ

87. The Court may frame issues based on the following –
ಈ ಕೆಳಗಿನವುಗಳ ಆಧಾರದ ಮೇಲೆ ನ್ಯಾಯಾಲಯವು ವಿವಾದಗಳನ್ನು ರಚಿಸಬಹುದಾಗಿರುತ್ತದೆ.

(a) The allegations made on oath by the parties, or by any person present on their behalf, or made by the pleaders of such parties
ಪಕ್ಷಗಾರರು ಅಥವ ಅವರ ಪರವಾಗಿ ಹಾಜರಾದ ಯಾವುದೇ ವ್ಯಕ್ತಿ ಶಪಥ ಪತ್ರದ ಮೂಲಕ ಮಾಡಿದ ಅಥವಾ ಅಂತಹ ಪಕ್ಷಗಾರರ ವಕೀಲರು ಮಾಡಿದ ಹೇಳಿಕೆಗಳು

(b) The allegations made in the pleadings or any answers to interrogatories delivered in the suit
ವಾದಪ್ರತಿವಾದ ಪತ್ರಗಳಲ್ಲಿನ ಹೇಳಿಕೆಗಳು ಅಥವಾ ದಾವೆಯಲ್ಲಿ ಪರಿಪ್ರಶ್ನೆಗೆ ನೀಡಿದ ಉತ್ತರಗಳು

(c) The contents of the documents produced by either party
ಪಕ್ಷಗಾರರಲ್ಲೊಬ್ಬ ಹಾಜರುಪಡಿಸಿದ ದಾಖಲೆಗಳ ಒಳಾಂಶಗಳು

(d) From all or any of the above materials
ಮೇಲಿನ ಎಲ್ಲಾ ಅಥವಾ ಯಾವುದೇ ವಸ್ತುಗಳಿಂದ

88. Cause of action to lodge a complaint for an offence punishable under Section 138 of Negotiable Instruments Act arises -
ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ ೧೩೮ ರಡಿ ಶಿಕ್ಷಿಸಲ್ಪಡಬಹುದಾದ ಅಪರಾಧ ಕುರಿತಂತೆ ದೂರು ದಾಖಲಿಸಲು ವ್ಯಾಜ್ಯ ಕಾರಣವು ಒದಗಿಸುವ ಸಂದರ್ಭವೆಂದರೆ -

(a) when notice is issued intimating the dishonour of cheque to the drawer
ಧನಾದೇಶಕನಿಗೆ ಚೆಕ್ಕಿನ ಅನಾಧರಣೆಯ ವಿಷಯ ತಿಳಿಸಿ ತಿಳುವಳಿಕೆ (ನೋಟಿಸು) ನೀಡಿದಾಗ

(b) when the drawer fails to pay the cheque amount within fifteen days from the date of receipt of notice
ತಿಳುವಳಿಕೆ (ನೋಟಿಸು) ಪತ್ರ ಸ್ವೀಕರಿಸಿದ ೧೫ ದಿನಗಳೊಳಗಾಗಿ ದನಾದೇಶಕನು ಚೆಕ್ಕಿನ ಮೊತ್ತವನ್ನು ಸಂದಾಯ ಮಾಡಲು ವಿಫಲನಾದಾಗ

(c) soon after the dishonour of the cheque by the drawer bank.
ದನಾದೇಷಿತ ಬ್ಯಾಂಕು ಚೆಕ್ಕಿನ ಅನಾದರಣೆಯನ್ನು ಮಾಡಿದ ತಕ್ಷಣ

(d) all the above conditions are to be satisfied
ಮೇಲಿನ ಎಲ್ಲಾ ಷರತ್ತುಗಳನ್ನು ಪೂರೈಸಬೇಕು

89. In the 10th Standard public examination B goes to the examination centre and starts answering on behalf of A. B is said to have committed _______ -
೧೦ ನೇ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ಬಿ ಯ ಪರೀಕ್ಷಾಕೇಂದ್ರಕ್ಕೆ ಹೋಗಿ ಎ ಪರವಾಗಿ ಉತ್ತರಿಸತೊಡಗುತ್ತಾನೆ. ಬಿ ಯು ______ ಎಸಗಿದಾನೆಂದು ಹೇಳಬಹುದಾಗಿರುತ್ತದೆ

(a) an offence of fraud
ವಂಚನೆಯ ಅಪರಾಧ

(b) cheating
ಮೋಸಗೊಳಿಸುವಿಕೆ

(c) cheating by personation
ಪರರೂಪಧಾರಣೆಯಿಂದ ಮೋಸ

(d) None of the above
ಮೇಲಿನವುಗಳ ಪೈಕಿ ಯಾವುದೂ ಅಲ್ಲ

90. The concept of "proof beyond reasonable doubt" in criminal cases finds a place in-
ಅಪರಾಧಿಕ ಪ್ರಕರಣಗಳಲ್ಲಿ "ಸಂಶಯಾತೀತವಾಗಿ ಸಾಬೀತುಪಡಿಸುವಿಕೆ" ಸಿದ್ಧಾಂತವು ___ರಲ್ಲಿ ಕಾಣಿಸಿಕೊಳ್ಳುತ್ತದೆ -

(a) Section 3 of Evidence Act
ಸಾಕ್ಷ್ಯ ಅಧಿನಿಯಮದ ಕಲಂ ೩

(b) In Criminal Procedure Code
ದಂಡಪ್ರಕ್ರಿಯಾ ಸಂವಹಿತೆಯಲ್ಲಿ

(c) Indian Penal Code
ಭಾರತ ದಂಡ ಸಂಹಿತೆ

(d) Evolved in judicial decisions over a period of time
ಕಾಲಾನುಕ್ರಮದಲ್ಲಿ ನ್ಯಾಯಿಕ ನಿರ್ಣಯಗಳಿಂದ ಹೊರಹೊಮ್ಮಿದೆ

91. World 'Yoga Day' falls on-
ವಿಶ್ವ 'ಯೋಗ ದಿನ' ವು _____ ದಿನದಂದು ಬರುತ್ತದೆ

(a) May 25th
ಮೇ ೨೫ ರಂದು

(b) June 21st
ಜೂನ್ ೨೧ ರಂದು

(c) June 25th
ಜೂನ್ ೨೫ ರಂದು

(d) June 30th
ಜೂನ್ ೩೦ ರಂದು

92. For application of the doctrine of lis-pendense, which of the following is not necessary-
'ವಿಚಾರಣಾಧೀನ ದಾವೆ' ಸಿದ್ಧಾಂತವನ್ನು ಅನ್ವಯಿಸುವಲ್ಲಿ ಕೆಳಗಿನವುಗಳ ಪೈಕಿ ಯಾವುದರ ಅವಶ್ಯಕತೆ ಇರುವುದಿಲ್ಲ-

(a) The purchaser must have acted bonafide without notice of the pendency of the proceedings
ನಡವಳಿಗಳು ಬಾಕಿ ಇರುವ ಕುರಿತು ತಿಳುವಳಿಕೆಯಿಲ್ಲದೆಯೇ ಕೊಳ್ಳುವವನು ಸದ್ಭಾವನಾಪೂರ್ವಕವಾಗಿ ವರ್ತಿಸಿರಬೇಕು

(b) The suit or proceeding must not be collusive
ದಾವೆ ಅಥವಾ ನಡಾವಳಿಯು ಶಾಮೀಲಾಗಿರುವಾಗಿರಬಾರದು

(c) Any right of immovable property is directly and specifically in question
ಸ್ಥಿರಾಸ್ತಿಯ ಯಾವುದೇ ಹಕ್ಕು ನೇರವಾಗಿ ಮತ್ತು ನಿರ್ದಿಷ್ಟವಾಗಿ ಪ್ರಶ್ನಿತವಾಗಿರಬೇಕು

(d) The proceedings must be pending in a Court of competent jurisdiction
ಸಕ್ಷಮ ಅಧಿಕಾರ ವ್ಯಾಪ್ತಿಯ ನ್ಯಾಯಾಲಯದಲ್ಲಿ ನಡವಳಿಗಳು ಬಾಕಿ ಇರಬೇಕು

93. The expression 'tenant holding over' is used to denote-
'ಬಾಡಿಗೆದಾರನ ಅತಿಧಾರಣೆ' ವೆಂಬ ಪದಾವಳಿ ಏನನ್ನು ಸೂಚಿಸುತ್ತದೆಯೆಂದರೆ-

a) Continuance of the existing tenant by renewing the tenancy
ಬಾಡಿಗೇದಾರಿಕೆಯನ್ನು ನವೀಕರಿಸಿ ಇರುವ ಬಾಡಿಗೇದಾರನನ್ನು ಮುಂದುವರಿಸುವುದು

(b) Continuance of a tenant in possession without the consent of the landlord after the determination of lease
ಭೋಗ್ಯದ ಕೊನೆಗೊಳಿಸುವಿಕೆಯ ನಂತರ ಮಾಲೀಕನ ಒಪ್ಪಿಗೆಯಿಲ್ಲದೆಯೇ ಬಾಡಿಗೇದಾರನು ಸ್ವಾದೀನದಲ್ಲಿ ಮುಂದುವರೆಯುವುದು

(c) A tenant continuing in possession after the determination of lease with the landlord's consent
ಮಾಲೀಕನ ಒಪ್ಪಿಗೇ ಮೇರೆಗೆ ಬಾಡಿಗೇಕಾರಿಕೆ ಕೊನೆಗೊಂಡ ನಂತರವೂ ಬಾಡಿಗೆದಾರನು ಸ್ವಾದೀನದಲ್ಲಿ ಮುಂದುವರೆಯುವುದು

(d) Continuance of the tenant in the premises against the will of the landlord but before the determination of lease
ಮಾಲೀಕನ ಇಚ್ಛೆಗೆ ವಿರುದ್ಧವಾಗಿ ಆದರೆ ಬೋಗ್ಯವು ಕೊನೆಗೊಳ್ಳುವುದಕ್ಕಿಂತಾ ಮುಂಚೆ ಬಾಡಿಗೆದಾರನು ಆವರಣದಲ್ಲಿ ಮುಂದುವರೆಯುವುದು

94. Which of the following professional communication by a client to his Advocate is protected from disclosure?
ಈ ಕೆಳಗಿನವುಗಳ ಪೈಕಿ ಕಕ್ಷೀದಾರನಿಂದ ಆತನ ವಕೀಲರಿಗೆ ನೀಡಿದ ವೃತ್ತಿಯಲ್ಲಿನ ಹೇಳಿಕೆ ಹೊರಗೆಡಹುವಿಕೆಯಿಂದ ರಕ್ಷಿಸಲ್ಪಟ್ಟಿದೆ?

(a) I have committed forgery and I want you to defend me

ನಾನು ಸುಳ್ಳು ಸಹಿ ಮಾಡಿದ್ದೇನೆ ಹಾಗೂ ನೀನು ನನ್ನನ್ನು ಪ್ರತಿರಕ್ಷಿಸಲು ಬಯಸುತ್ತೇನೆ

(b) I want to obtain possession of property by using a forged deed on which I request you to sue
ಕೃತ್ರಿಮದಾಸ್ತಾವೇಜನ್ನು ಬಳಸಿ ಆಸ್ತಿಯೊಂದರ ಸ್ವಾದೀನವನ್ನು ಪಡೆಯಲು ನಾನು ಬಯಸಿದ್ದು ಆ ನಿಟ್ಟಿನಲ್ಲಿ ನಾನು ದಾವೆಹೂಡಲು ನಿಮ್ಮನ್ನು ಕೋರುತ್ತಿದ್ದೇನೆ

(c) I have killed 'B' and want your help to dispose of the body and the weapon
ನಾನು 'ಬಿ' ಯನ್ನು ಕೊಂದಿದ್ದು ಶವವನ್ನು ಮತ್ತು ಆಯುಧವನ್ನು ವಿಲೆಮಾಡುವಲ್ಲಿ ನಿಮ್ಮ ಸಹಾಯ ಕೋರುತ್ತಿದ್ದೇನೆ

(d) I will pay you whatever fees you want if you can silence the eye witness and make him not to depose against me
ಪ್ರತ್ಯಕ್ಷ ದರ್ಶ ಸಾಕ್ಷಿ ಸುಮ್ಮನಿರುವಂತೆ ಮಾಡಿದಲ್ಲಿ ಮತ್ತು ಆತನು ನನ್ನ ವಿರುದ್ಧ ಹೇಳಿಕೆ ನೀಡದಂತೆ ನೀವು ಮಾಡಿದಲ್ಲಿ ನಾನು ನಿಮಗೆ ನೀವು ಕೇಳಿದ ಶುಲ್ಕ ನೀಡುತ್ತೇನೆ

95. Doing of an act which would bring the Government establishment by law in India into hatred or contempt is called as -
ಭಾರತದಲ್ಲಿ ವಿಧಿಬದ್ಧವಾಗಿರುವ ಸರ್ಕಾರಿಸಂಸ್ಥೆಯನ್ನು ದ್ವೇಷಕ್ಕೆ ಅಥವಾ ನಿಂದನೆಗೆ ಈಡು ಮಾಡುವ ಕ್ರಿಯೆಯನ್ನು ಮಾಡುವುದನ್ನು _____ ಎಂದು ಕರೆಯಲಾಗುತ್ತದೆ-

(a) Conspiracy
ಪಿತೂರಿ

(b) Waging war against the Government
ಸರ್ಕಾರದ ವಿರುದ್ಧ ಸಮರ ಸಾರುವಿಕೆ

(c) Sedition
ರಾಜದ್ರೋಹ

(d) Abetment
ಪ್ರಚೋದನೆ

96. Spes succession is-
ಉತ್ತರಾಧಿಕಾರದ ಆಸೆ ಎಂದರೆ-

(a) Lawful succession
ವಿಧಿಸಮ್ಮತ ಉತ್ತರಾಧಿಕಾರ

(b) Assured inheritance
ಆಶ್ವಾಸನೆಯೊಡಗೂಡಿದ ವಾರಸು

(c) Promised inheritance
ವಚನಸ್ವರೂಪಿ ವಾರಸು

(d) Expectation of succession
ಉತ್ತರಾಧಿಕಾರದ ನಿರೀಕ್ಷೆ

97. 'Legacy' means-
ಮರಣ ಶಾಸನ ಸ್ವತ್ತು ಎಂದರೆ-

(a) Devolving of property by settlement
ಇತ್ಯರ್ಥಪಡಿಸುವಿಕೆ ಮೂಲಕ ಆಸ್ತಿ ಪ್ರಾಪ್ತವಾಗುವುದು

(b) Expectancy of property by will
ಉಯಿಲಿನ ಮೂಲಕ ಸ್ವತ್ತಿನ ನಿರೀಕ್ಷೆ

(c) Devolving of property after the death of the testator
ಉಯಿಲುದಾರನ ಮರಣದ ನಂತರ ಆಸ್ತಿಪ್ರಾಪ್ತವಾಗುವುದು

(d) None of the above
ಮೇಲಿನವುಗಳ ಪೈಕಿ ಯಾವುದೂ ಅಲ್ಲ

98. The Karnataka Rent Act, 1999 does not apply to-
ಕರ್ನಾಟಕ ಬಾಡಿಗೆ ಕಾಯ್ದೆ ೧೯೯೯ ಈ ಕೆಳಗಿನದಕ್ಕೆ ಅನ್ವಯವಾಗುವುದಿಲ್ಲ-

(a) any premises belonging to a Muzarai or religious or charitable institution
ಮುಜರಾಯಿ ಅಥವಾ ಧಾರ್ಮಿಕ ಅಥವಾ ಧರ್ಮಾರ್ಥ ಸಂಸ್ಥೆಗೆ ಸೇರಿದ ಆವರಣಗಳಿಗೆ

(b) to any building belonging to a Market Committee established under the Karnataka Agricultural Produce Marketing Regulation, 1966
ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣಗಳು, ೧೯೬೬ ರಡಿ ಸ್ಥಾಪಿತವಾದ ಮಾರುಕಟ್ಟೆ ಸಮಿತಿಗೆ ಸೇರಿದ ಯಾವುದೇ ಕಟ್ಟಡಕ್ಕೆ

(c) to any premises belonging to a Wakf
ವಕ್ಫ್‌ಗೆ ಸೇರಿದ ಯಾವುದೇ ಆವರಣಕ್ಕೆ

(d) all of the above
ಮೇಲಿನವುಗಳೆಲ್ಲವು

99. By Act 13 of 2013, the following offences have been added to the IPC as offences-
೨೦೧೩ ರ ಅಧಿನಿಯಮ ೧೩ ರಡಿ ಕೆಳಗಿನ ಯಾವ ಅಪರಾಧಗಳನ್ನು ಅಪರಾಧಗಳನ್ನಾಗಿ ಭಾರತ ದಂಡ ಸಂಹಿತೆಯಲ್ಲಿ ಸೇರಿಸಲಾಗಿದೆ-

(a) Sexual Harassment
ಲೈಂಗಿಕ ಕಿರುಕುಳ

(b) Stalking
ಕದ್ದುನಡೆ

(c) Voyeurism
ವಾಯರಿಸಮ್(ಲೈಂಗಿಕ ದರ್ಶನ ತೃಪ್ತಿ)

(d) All of the above
ಮೇಲಿನವುಗಳೆಲ್ಲವೂ

100. Which Article abolishes untouchability?
ಅಸ್ಪೃಶ್ಯತೆಯನ್ನು ಯಾವ ಅನುಚ್ಛೇದ ನಿರ್ಮೂಲನೆ ಮಾಡಿದೆ?

(a) Article 15
ಅನುಚ್ಛೇದ ೧೫

(b) Article 16
ಅನುಚ್ಛೇದ ೧೬

(c) Article 17
ಅನುಚ್ಛೇದ ೧೭

(d) Article 18
ಅನುಚ್ಛೇದ ೧೮

*****